ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Swabhimani Sahakari

Pages - 32, ₹12

# ಸ್ವಾಭಿಮಾನಿ ಸಹಕಾರಿ

Volume -14

Issue - 11

November - 2017

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ




ದಿನಾಂಕ: 18-11-2017

ಸ್ಥಳ: ತುಮಕೂರು

## 64ನೇ ಅಖಿಲ ಭಾರತ ಸಹಕಾರ ಸಪ್ತಾಹ - 2017

## "ತಾಂತ್ರಿಕ ಜಾಗೃತಿ ಮತ್ತು ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ"

## ದಿನಾಚರಣೆ



ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಕನ್ನಡ ಎನೆ ಕುಣಿದಾಡುವುದೆನ್ನೆದೆ
ಕನ್ನಡ ಎನೆ ಕಿವಿ ನಿಮಿರುವುದು ।
- ಕುವೆಂಪು



ನವೆಂಬರ್ 14:
ಮಕ್ಕಳ ದಿನಾಚರಣೆ
ಹಾಗೂ
ಸಹಕಾರ ಸಪ್ತಾಹ

ಸೌಹಾರ್ದ ಸಹಕಾರಿಗಳ ಸಂಖ್ಯೆ : 4158 ‘ಇ’ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1083



## ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಯ ಪ್ರಥಮ ಹೆಜ್ಜೆ ದಾವಾ ಪಂಚಾಯಿತಿ ನ್ಯಾಯಾಲಯದ ಸಂಚಾರಿ ಪೀಠಗಳ ಕಾರ್ಯಾರಂಭ ಸಮಾರಂಭದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗೆ ಒತ್ತು - ಸಹಕಾರ ಸಚಿವರಿಗೆ ಮತ್ತೆ ಬೆಂಗಳೂರಿನಲ್ಲಿ ಮನವಿ ಸಲ್ಲಿಕೆ - ಸಚಿವರ ಸಕಾರಾತ್ಮಕ ಸ್ಪಂದನೆ - ಸೌಹಾರ್ದ ಸಹಕಾರಿಗಳಲ್ಲಿ ಹೊಸ ಉತ್ಸಾಹ

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ 62ನೇ ಕನ್ನಡ ರಾಜ್ಯೋತ್ಸವ, ಗುರುನಾನಕ್ ಜಯಂತಿ ಹಾಗೂ ಕನಕದಾಸ ಜಯಂತಿಯ ಹಾರ್ದಿಕ ಶುಭಾಷಯಗಳು. ರಾಜ್ಯದ ಸಹಕಾರ ಚಳುವಳಿಯ ಅಭಿವೃದ್ಧಿಗೆ ಈ ಕನ್ನಡ ರಾಜ್ಯೋತ್ಸವ ಇನ್ನೂ ಹೆಚ್ಚಿನ ಶಕ್ತಿಯನ್ನು ತುಂಬಿ ಸಹಕಾರ ಚಳುವಳಿಯು ಗುಣಾತ್ಮಕ ಹಾಗೂ ಸಂಖ್ಯಾತ್ಮಕವಾಗಿ ಬೆಳೆದು ಸದಸ್ಯರ ಹಾಗೂ ಸಾರ್ವಜನಿಕರ ಆಶೋತ್ತರಗಳ ಈಡೇರಿಕೆಯ ಉತ್ತಮ ತಾಣವಾಗಲಿ ಎಂದು ಹಾರೈಸುತ್ತೇನೆ.

ದಿನಾಂಕ : 24 ಅಕ್ಟೋಬರ್ 2017ರಂದು ಮಾನ್ಯ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳ ಸಂಚಾರಿ ನ್ಯಾಯ ಪೀಠಗಳ ಉದ್ಘಾಟನೆ ಮಾಡಿರುವುದು ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಯ ಕ್ರಿಯಾ ಯೋಜನೆಗಳ ಅನುಷ್ಠಾನದ ಪ್ರಥಮ ಹೆಜ್ಜೆ. ಈ ಕಾರ್ಯವನ್ನು ನೆರವೇರಿಸಿ ಕೊಟ್ಟುದುದಕ್ಕಾಗಿ ಮಾನ್ಯ ಸಹಕಾರ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ ಹಾಗೂ ಈ ಕಾರ್ಯದ ಯಶಸ್ಸಿಗೆ ಸಹಕರಿಸಿದ ಆಡಳಿತ ಮಂಡಲಿಯವರಿಗೆ, ಬೆಳಗಾವಿಯ ಸಮಸ್ತ ಸಹಕಾರಿ ಧುರೀಣರಿಗೆ ಹಾಗೂ ಸೌಹಾರ್ದ ಸಹಕಾರಿಗಳಿಗೆ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸವದಿಯವರು ಹಾಗೂ ಮಾನ್ಯ ರಾಜ್ಯಸಭಾ ಸದಸ್ಯರಾದ ಶ್ರೀ ಪ್ರಭಾಕರ ಕೋರೆಯವರು ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಕವಟಗಿಮಠರವರು ಸೌಹಾರ್ದ ಸಹಕಾರಿ ಕಾರ್ಯಚಟುವಟಿಕೆಗಳ ಬಗ್ಗೆ ಸಂತೋಷ ವ್ಯಕ್ತಪಡಿಸುವುದರ ಜೊತೆಗೆ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಮೂಲ ಸ್ವರೂಪವನ್ನು ಪುನರ್‌ಸ್ಥಾಪಿಸುವ ತಿದ್ದುಪಡಿಗಳನ್ನು ಜಾರಿಗೆ ತರುವಂತೆ ಒತ್ತಾಯಿಸಿ ಭಾಷಣ ಮಾಡಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ. ಅದಕ್ಕಾಗಿ ಎಲ್ಲಾ ಗಣ್ಯರಿಗೂ ಕೃತಜ್ಞತೆಗಳನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಸಲ್ಲಿಸುತ್ತದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿ ಬೆಳೆಯಲು ಈ ತಿದ್ದುಪಡಿಗಳು ಶೀಘ್ರವಾಗಿ ಆಗುವುದು ಅವಶ್ಯಕ. ಈ ದೃಷ್ಟಿಯಿಂದ ಮತ್ತೆ ಮಾನ್ಯ ಸಹಕಾರ ಸಚಿವರನ್ನು ಭೇಟಿ ಮಾಡಿ ಬೆಂಗಳೂರಿನಲ್ಲಿ ಮನವಿ ಪತ್ರ ಸಲ್ಲಿಸಲಾಗಿದೆ. ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಶೀಘ್ರದಲ್ಲಿ ತಿದ್ದುಪಡಿಗಳು ವಿಧಾನ ಮಂಡಳದ ಅಧಿವೇಶನದಲ್ಲಿ ಮಂಡನೆಯಾಗುವಂತೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದಾರೆ.

ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಮಾನ್ಯ ಸಚಿವರ ಈ ಕ್ರಮದಿಂದ ಹೊಸ ಉತ್ಸಾಹ ಬಂದಂತಾಗಿದೆ. ಸಂಯುಕ್ತ ಸಹಕಾರಿಯ ಈ ಕ್ರಮಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ನಿರಂತರ ಸಂಪೂರ್ಣ ಬೆಂಬಲ ಹಾಗೂ ಸಹಕಾರವನ್ನು ನೀಡುವಿರಾಗಿ ಆಶಿಸುತ್ತೇನೆ.

> ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿ ಬೆಳೆಯಲು ಈ ತಿದ್ದುಪಡಿಗಳು ಶೀಘ್ರವಾಗಿ ಆಗುವುದು ಅವಶ್ಯಕ. ಈ ದೃಷ್ಟಿಯಿಂದ ಮತ್ತೆ ಮಾನ್ಯ ಸಹಕಾರ ಸಚಿವರಿಗೆ ಭೇಟಿ ಮಾಡಿ ಬೆಂಗಳೂರಿನಲ್ಲಿ ಮನವಿ ಪತ್ರ ಸಲ್ಲಿಸಲಾಗಿದೆ. ಮಾನ್ಯ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಶೀಘ್ರದಲ್ಲಿ ತಿದ್ದುಪಡಿಗಳು ವಿಧಾನ ಮಂಡಳದ ಅಧಿವೇಶನದಲ್ಲಿ ಮಂಡನೆಯಾಗುವಂತೆ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ್ದಾರೆ.

**ಬಿ.ಹೆಚ್. ಕೃಷ್ಣಾರೆಡ್ಡಿ**, ಅಧ್ಯಕ್ಷರು

**ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ**

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop

**ಒಳಪುಟಗಳಲ್ಲಿ . . .**

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳ ಸಂಚಾರಿ ನ್ಯಾಯಪೀಠಗಳ ಉದ್ಘಾಟನೆ ........ 5

64ನೇ ಅಖಿಲ ಭಾರತ ಸಹಕಾರ ಸಪ್ತಾಹ - 2017 : ಪೂರ್ವಭಾವಿ ಸಿದ್ಧತಾ ಸಭೆ ........................................ 7

ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ .......... 10

ಸಂಯುಕ್ತ ಸಹಕಾರಿಯ ನಿರ್ದೇಶಕರ ವ್ಯಕ್ತಿ ಪರಿಚಯ ಭಾಗ - 5 .. ..................................................................... 12

ಸೌಹಾರ್ದ ಸಹಕಾರಿ ಸಮಾಚಾರಗಳು ....................... 14

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು ................... 17

ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಿಬ್ಬಂದಿಯವರ ಪಾತ್ರ ಮಹತ್ವದು : ಸಿಬ್ಬಂದಿ ಸಂಸ್ಥೆಯ ಮುಖವಾಣಿ ........... 24

ಸಾಮಾಜಿಕ ಬದಲಾವಣೆಯಲ್ಲಿ ಸಹಕಾರದ ಪಾತ್ರ .... 27

ಮಾನ್ವಿಯ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕಿನ "ಆರ್ಥಿಕ ವಿಶ್ಲೇಷಣೆ" ............................................ 28

# ಸಂಪಾದಕೀಯ

## ಸಂಚಾರಿ ನ್ಯಾಯ ಪೀಠಗಳ ಉದ್ಘಾಟನೆ – ಸೌಹಾರ್ದ ಸಹಕಾರಿಗಳು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವುದು ಅವಶ್ಯಕ

ಕರ್ನಾಟಕ ರಾಜ್ಯ ಸರಕಾರವು ಸೌಹಾರ್ದ ಸಂಯುಕ್ತ ಸಹಕಾರಿಗೆ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯವನ್ನು ಮಂಜೂರು ಮಾಡಿ, ಅದು ಬೆಂಗಳೂರಿನಲ್ಲಿ ಕಾರ್ಯನಿರ್ವಹಣೆಯನ್ನು ಪ್ರಾರಂಭ ಮಾಡಿದ ಈ ಒಂದು ವರ್ಷದ ಅವಧಿಯಲ್ಲಿ 3295 ಪ್ರಕರಣಗಳು ದಾಖಲಾಗಿ 2266 ಪ್ರಕರಣಗಳು ಇತ್ಯರ್ಥವಾಗಿವೆ. ಸದರಿ ನ್ಯಾಯಾಲಯವು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಬೆಂಗಳೂರಿಗೆ ಬಂದು ಹೋಗುವ ಪ್ರಯಾಣವು ಕಷ್ಟದಾಯಕ ಹಾಗೂ ಹೆಚ್ಚಿನ ಹೊರೆಯಾಗುತ್ತಿರುವುದರ ಪರಿಣಾಮವಾಗಿ ಪ್ರಕರಣಗಳನ್ನು ದಾಖಲಿಸುವುದರಲ್ಲಿ ಆಗುವ ವಿಳಂಬ ಮತ್ತು ಇವೆಲ್ಲವುಗಳಿಗೆ ತಗಲುವ ವೆಚ್ಚ ಇತ್ಯಾದಿಗಳನ್ನು ಗಮನಿಸಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ಈ ದಾವಾ ಪಂಚಾಯಿತಿ ನ್ಯಾಯಾಲಯದ ಸಂಚಾರಿ ಪೀಠಗಳನ್ನು ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳಲ್ಲಿ ಪ್ರಾರಂಭಿಸಿರುವುದು ಸ್ವಾಗತಾರ್ಹ ಕಾರ್ಯವೆಂದು ಭಾವಿಸಬಹುದಾಗಿದೆ.

ಈ ಸಂಚಾರಿ ನ್ಯಾಯಪೀಠಗಳ ಉದ್ಘಾಟನೆಯನ್ನು ನೆರವೇರಿಸಿದ ಮಾನ್ಯ ಸಹಕಾರ ಸಚಿವರಾದ ಶ್ರೀ ರಮೇಶ್ ಜಾರಕಿಹೊಳಿಯವರು ಹಾಗೂ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮಾನ್ಯ ಮಾಜಿ ಸಹಕಾರ ಸಚಿವರಾದ ಶ್ರೀ ಲಕ್ಷ್ಮಣ ಸವದಿಯವರು ಬೆಳಗಾವಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ವಿಶ್ವಾಸ ಹಾಗೂ ಕ್ರಿಯಾಶೀಲತೆ ಇದೆ. ಸಹಕಾರಿ ಸಂಸ್ಥೆಗಳ ಸಂಖ್ಯೆಯೂ ಹೆಚ್ಚಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಲಕ್ಷ್ಮಣ ಸವದಿಯವರು ಹೀಗಾಗಿ ಸಂಚಾರಿ ಪೀಠದ ಬದಲಿಗೆ ಪೂರ್ಣ ಪ್ರಮಾಣದ ಪೀಠ ಮಂಜೂರು ಮಾಡಲು ಸರಕಾರವನ್ನು ಆಗ್ರಹಿಸಿರುವುದು ಸ್ವಾಗತಾರ್ಹ.

ಸೌಹಾರ್ದ ಸಹಕಾರಿಗಳು ಪ್ರಕರಣಗಳನ್ನು ದಾಖಲು ಮಾಡಲು ವಿಳಂಬವಾಗಬಾರದು, ಸೌಹಾರ್ದ ಸಹಕಾರಿಗಳ ನ್ಯಾಯ ಪಂಚಾಯಿತಿಗಳ ಪ್ರಕರಣಗಳು ಆದಷ್ಟು ಶೀಘ್ರವಾಗಿ ಬೇಗ ಬೇಗ ಇತ್ಯರ್ಥವಾಗಬೇಕು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ಸೌಹಾರ್ದ ಸಹಕಾರಿಗಳು ಈ ವ್ಯವಸ್ಥೆಯನ್ನು ಪೂರ್ಣ ಪ್ರಮಾಣದಲ್ಲಿ ಸದುಪಯೋಗ ಪಡಿಸಿಕೊಳ್ಳಬೇಕು. ಸಂಯುಕ್ತ ಸಹಕಾರಿಯ ಈ ಪ್ರಯತ್ನವನ್ನು ಸಾರ್ಥಕಗೊಳಿಸಲು ಸಹಕರಿಸುವುದು ಅವಶ್ಯಕ.

ಸೌಹಾರ್ದ ಸಹಕಾರಿ ಕ್ಷೇತ್ರದ ಆರೋಗ್ಯಕರ ಬೆಳವಣಿಗೆ ಸಂಚಾರಿ ನ್ಯಾಯ ಪೀಠಗಳ ಪ್ರಾರಂಭ ಒಂದು ಉತ್ತಮ ಬೆಳವಣಿಗೆ ಎಂದು ಹೇಳಬಹುದಾಗಿದೆ.

# ಗಾಳಿಗೋಪುರ ಕಟ್ಟಬೇಡಿ, ವಾಸ್ತವವಾದಿಗಳಾಗಿ



## ಜ್ಞಾನ ಜ್ಯೋತಿ

ಶ್ರೀ ಬಸವಮೂರ್ತಿ
ಮಾದಾರ ಚೆನ್ನಯ್ಯ ಸ್ವಾಮೀಜಿ

ನಮ್ಮದು ಒಂದು ರೀತಿಯ ಸೋಜಿಗದ ಸಮಾಜ. ಇಲ್ಲಿ ಎಲ್ಲಾ ರೀತಿಯ ಜಾದೂಗಳು ನಡೆಯುತ್ತವೆ. ಏನೊಂದೂ ಪರಿಶ್ರಮವಿಲ್ಲದೇ ಶ್ರೀಮಂತರಾಗುವವರು, ಉನ್ನತ ಅಧಿಕಾರ ಪಡೆಯುವವರು, ಸುಖಾಸುಮ್ಮನೆ ಎಲ್ಲಾ ಕಡೆ ಸಲ್ಲುವವರನ್ನು ನೋಡುತ್ತೇವೆ. ಇದಕ್ಕೆ ಕಾರಣಗಳನ್ನು ಪರಾಮರ್ಶಿಸುತ್ತಾ ಹೊರಟಾಗ ಅದರ ಮೂಲ ಏನೆಂದು ತಿಳಿಯುವುದೇ ಇಲ್ಲ. ಅವರು ಕೊನೆಗೂ ಒಗಟಾಗಿಯೇ ಉಳಿದು ಬಿಡುತ್ತಾರೆ.

ಇದನ್ನು ಹೇಳಲು ಕಾರಣವಿದೆ. ಮೇಲೆ ಹೇಳಿದ ನಿದರ್ಶನಗಳು ನಮ್ಮ ಸಮಾಜದ ಸಾಮಾನ್ಯೀಕೃತ ಸಂಗತಿಗಳಲ್ಲ. ಅವು ಆಕಸ್ಮಿಕಗಳಷ್ಟೇ. ಯಾವುದೋ ಕಾರಣ, ಸಂದರ್ಭ ಕೆಲವರಿಗೆ ಅಂತಹ ಅವಕಾಶ ಸಿಕ್ಕಿರುತ್ತವೆ ಅಷ್ಟೇ. ಇದನ್ನು ನಾವು ಸರಿಯಾಗಿ ಗ್ರಹಿಸಬೇಕು. ಬಹಳಷ್ಟು ಜನ ನಾವು ಅಂತಹವರಲ್ಲೊಬ್ಬರಾಗಬೇಕು ಎನ್ನುವ ಭ್ರಮೆಯ ಬೆನ್ನೇರಿ ಹೊರಡುತ್ತಾರೆ. ಶ್ರೀಮಂತರು, ಅಧಿಕಾರಸ್ಥರು, ಪ್ರಭಾವಿಗಳ ಬಳಿ ಸುಖಾಸುಮ್ಮನೆ ಹತ್ತಿರವಾಗಲು ಬಯಸುತ್ತಾರೆ. ಹತ್ತಿರವಾದವರೂ ಪ್ರಯೋಜನ ಪಡೆದುಕೊಳ್ಳದೇ ಪರಿತಪಿಸುತ್ತಾರೆ. 'ನಾನು ಅಂದುಕೊಂಡದ್ದೇ ಬೇರೆ. ಇಲ್ಲಿ ಆಗುತ್ತಿರುವುದೇ ಬೇರೆ' ಎಂದು ಜಿಜ್ಞಾಸೆಗೆ ಒಳಗಾಗುತ್ತಾರೆ. ಹತಾಶರೂ ಆಗುತ್ತಾರೆ.

ನಾವು ಯಾರೋ ಜತೆಯಲಿದ್ದ ಕಾರಣಕ್ಕೇ ಏನೇನೋ ಆಗಿ ಬಿಡುತ್ತೇವೆ ಎಂದು ಭಾವಿಸುವುದು ಸರಿಯಲ್ಲ. ವಾಸ್ತವದಲ್ಲಿ ಹಾಗಾಗುವುದೂ ಇಲ್ಲ. ರಾಜಕಾರಣಿಗಳು, ಸಿನಿಮಾ ನಟರು, ಉನ್ನತ ಅಧಿಕಾರಿಗಳ ಜತೆ ಒಡನಾಟವಿದ್ದವರು ಬರಿಗೈಯಲ್ಲಿ ಬೀದಿಗೆ ಬಿದ್ದ ನಿದರ್ಶನಗಳೂ ಇರುತ್ತವೆ. "ಇವ್ರು ಯಾರು ಗೊತ್ತೇನಪ್ಪಾ? ಅವ್ರು ಜತೇಲಿದ್ರೂ ಆದ್ರೂ ಏನೂ ಮಾಡ್ಕೋಳ್ಳಿಲ್ಲ. ಎಂತೆಂತೋರೋ ಏನೇನೋ ಆದ್ರು. ಈತ ಮಾತ್ರ ಏನೂ ಮಾಡ್ಕಳ್ಳಿಲ್ಲ. ಈತ ಮನಸ್ಸು ಮಾಡಿದ್ರೆ ಏನಾದ್ರೂ ಮಾಡ್ಕೋಬಹುದಿತ್ತು" ಎಂದು ಹೇಳುವವರನ್ನು ನಾವು ನೋಡಿದ್ದೇವೆ.

ವಾಸ್ತವದಲ್ಲಿ ಇವ್ರು, ಅವ್ರ ಜತೆಯಲ್ಲಿ ಮಾತ್ರ ಅಲ್ಲ ಯಾರ ಜತೆಯಲ್ಲಿದ್ರೂ ಇದೇ ಸ್ಥಿತಿಯಲ್ಲಿ ಇರುತ್ತಿದ್ದರು. ಮೂಲಭೂತವಾಗಿ ತನ್ನ ಬದುಕು ರೂಪಿಸಿಕೊಳ್ಳಲು ಅನುಕೂಲಕರ ವಾತಾವರಣ ಇದ್ದಾಗಲೂ ಹಾಗೇ ಮಾಡದೇ ಪಲಾಯನವಾದಿಗಳಂತೆ ನಡೆದುಕೊಳ್ಳುವವರು ಅಸಮರ್ಥರಾಗಿರುತ್ತಾರೆ. ತಮ್ಮ ಸೋಮಾರಿತನ, ಹೊಣೆಗೇಡಿತನದಿಂದಲೇ ಎಲ್ಲಾ ಅವಕಾಶಗಳನ್ನೂ ಕೈಚೆಲ್ಲಿಕೊಂಡು ಬಿಡುತ್ತಾರೆ. ಆದರೆ, ಕ್ರಿಯಾಶೀಲವಾಗಿರುವವನು ಎಲ್ಲಿದ್ದರೂ ತನ್ನ ಪಾಲಿನದನ್ನು ಪಡೆದುಕೊಳ್ಳಲು ಸದಾ ಪ್ರಯತ್ನಿಸುತ್ತಲೇ ಇರುತ್ತಾನೆ. ಒಂದು ಸಣ್ಣ ಅವಕಾಶ ಸಿಕ್ಕ ತಕ್ಷಣ ಎಚ್ಚೆತ್ತುಕೊಂಡು ಕೈವಶ ಮಾಡಿಕೊಂಡು ಬಿಡುತ್ತಾನೆ. "ಅವನು ಸುಮ್ಮನೆ ಅಡ್ಡಾಡಿಕೊಂಡು ಇದ್ನಪ್ಪಾ. ಆವಾಗ ಒಂದು ಛಾನ್ಸ್ ಸಿಕ್ತು ನೋಡು. ಆಮೇಲೆ ಸ್ಟಾಂಡ್ ಆಗ್ಬಿಟ್ಟ" ಎಂದು ಇಂತಹವರನ್ನು ನೋಡಿಯೇ ಹೇಳುತ್ತೇವೆ. ಈಗ ಇಂತಹವರ ಸಂಖ್ಯೆ ಹೆಚ್ಚುತ್ತಿರುವುದು ನಮ್ಮ ಸಾರ್ವಜನಿಕ ವಲಯದಲ್ಲಿ ಒಂದು ಸಂಕ್ಷೋಭೆಯನ್ನೇ ಹುಟ್ಟು ಹಾಕಿದೆ.

ಮೇಲಿನ ಎರಡೂ ಉದಾಹರಣೆಗಳಲ್ಲಿ ನೋಡಿದಂತೆ ಇದು ಸಂದರ್ಭ, ವ್ಯಕ್ತಿ, ಅವಕಾಶಗಳನ್ನು ಅವಲಂಬಿಸಿರುತ್ತದೆ. ಎಲ್ಲಾ ಸಂದರ್ಭ, ವ್ಯಕ್ತಿಗಳ ವಿಷಯದಲ್ಲಿ ಇದು ಸಂಭವಿಸುವುದಿಲ್ಲ. ಇಂತಹ ಗಾಳಿಗೋಪುರದ ಲೆಕ್ಕಾಚಾರದ ಬೆನ್ನು ಹತ್ತುವುದರ ಬದಲಿಗೆ ನಾವು ನಮ್ಮ ಸಾಮರ್ಥ್ಯ, ಕೌಶಲ್ಯ, ಪ್ರಯತ್ನಗಳನ್ನು ಅವಲಂಬಿಸಿಯೇ ಉನ್ನತ ಸ್ಥಾನಮಾನ ಪಡೆಯಲಿಚ್ಛಿಸುವುದೇ ಉಚಿತ ಮಾರ್ಗ. ಅದು ನಮ್ಮನ್ನು ಎಂದೂ ನಿರಾಶೆಗೆ ತಳ್ಳುವುದಿಲ್ಲ. ವಿಫಲರಾದರೆ, ಸಫಲರಾಗುವ ದಾರಿ ತೋರಿಸುತ್ತದೆ. ಸಫಲರಾದರೆ, ಮತ್ತಷ್ಟು ಸಾಧನೆಯ ಹಾದಿ ತೆರೆದುಕೊಳ್ಳುತ್ತದೆ.

### ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ ವಿಭಾಗದಿಂದ 2103 ಮತ್ತು ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ವಿಭಾಗಗಳಿಂದ 1192 ಪ್ರಕರಣಗಳು ಸೇರಿದಂತೆ ಒಟ್ಟು 3295 ದಾವಾ ಪ್ರಕರಣಗಳು ದಾಖಲಾಗಿವೆ. ಇವುಗಳ ಪೈಕಿ 2266 ಪ್ರಕರಣಗಳು ಇತ್ಯರ್ಥಗೊಂಡಿವೆ.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 487 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 13 ಪ್ರಕರಣ ಇತ್ಯರ್ಥಗೊಂಡಿದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 866 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು, 09 ಪ್ರಕರಣಗಳು ಇತ್ಯರ್ಥಗೊಂಡಿವೆ.

### ಸಂಯುಕ್ತ ಸಹಕಾರಿಯ ಶಾಸನಬದ್ಧ ಕರ್ತವ್ಯಗಳು

ಪ್ರಗತಿ ವಿವಿದೋದ್ದೇಶ ಸೌಹಾರ್ದ ಪತ್ತಿನ ಸಹಕಾರಿ ನಿ., ದುರ್ಗಿಗುಡಿ, ಶಿವಮೊಗ್ಗ ಸಹಕಾರಿಯ ಉಪವಿಧಿ ಸಂಖ್ಯೆ: 29(5)ರಂತೆ ಆಡಳಿತ ಮಂಡಲಿ ಸಭೆಗೆ ಅವಶ್ಯಕ ಕೋರಂ ಸಂಖ್ಯೆ 06 ಆಗಿದ್ದು, 06 (ಆರು) ನಿರ್ದೇಶಕರೂ ರಾಜೀನಾಮೆ ನೀಡಿರುವುದರಿಂದ ಸಹಕಾರಿಯ ಆಡಳಿತ ಮಂಡಲಿಯ ಸದಸ್ಯರ ಸಂಖ್ಯೆಯು ಕೋರಂಗೆ ಅಗತ್ಯ ಸಂಖ್ಯೆಕ್ಕಿಂತ ಕಡಿಮೆಯಾಗಿ ಸಾಂವಿಧಾನಿಕ ಬಿಕ್ಕಟ್ಟು ಉಂಟಾಗಿರುವ ಕಾರಣದಿಂದಾಗಿ ಶ್ರೀ ವೀರಶೆಟ್ಟಿ, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ವಿಭಾಗೀಯ ಕಛೇರಿ, ಬೆಂಗಳೂರು ಇವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿ ದಿನಾಂಕ 26 ಅಕ್ಟೋಬರ್ 2017ರ ಮೂಲಕ ಆದೇಶಿಸಲಾಗಿದೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳ ಸಂಚಾರಿ ನ್ಯಾಯಪೀಠಗಳ ಉದ್ಘಾಟನೆ

**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ : 24 ಅಕ್ಟೋಬರ್ 2017ರಂದು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ಬೆಳಗಾವಿ, ಕಲಬುರಗಿ ಹಾಗೂ ಮೈಸೂರು ವಿಭಾಗಗಳ ಸಂಚಾರಿ ನ್ಯಾಯಪೀಠಗಳ ಉದ್ಘಾಟನೆಯನ್ನು ಧರ್ಮನಾಥ ಭವನ, ಬೆಳಗಾವಿ ಇಲ್ಲಿ ಆಯೋಜಿಸಲಾಗಿತ್ತು.



ಉದ್ಘಾಟನಾ ಕಾರ್ಯಕ್ರಮ



ಭಾಗವಹಿಸಿದ ಸಹಕಾರಿಗಳು



ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಮಾನ್ಯ ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ರಮೇಶ ಜಾರಕಿಹೊಳಿಯವರು

## ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯ ತಿದ್ದುಪಡಿಗಳಿಗೆ ಸರ್ಕಾರ ಬದ್ಧ

### - ಶ್ರೀ ರಮೇಶ ಜಾರಕಿಹೊಳಿ, ಮಾನ್ಯ ಸಹಕಾರ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಯ ಮೂಲಕ ಅನುಕೂಲತೆಗಳನ್ನು ಕಲ್ಪಿಸುವುದರಲ್ಲಿ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು.

## ಸಂಚಾರಿ ನ್ಯಾಯಪೀಠಗಳ ಪ್ರಾರಂಭ ಸ್ವಾಗತಾರ್ಹ : ಬೆಳಗಾವಿಯಲ್ಲಿ ಖಾಯಂ ನ್ಯಾಯಪೀಠ ಅಗತ್ಯ

### - ಶ್ರೀ ಲಕ್ಷ್ಮಣ ಸವದಿ, ಮಾನ್ಯ ಮಾಜಿ ಸಹಕಾರ ಸಚಿವರು ಹಾಗೂ ಶಾಸಕರು



ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಮಾತನಾಡಿದ ಮಾನ್ಯ ಮಾಜಿ ಸಹಕಾರ ಸಚಿವರು ಹಾಗೂ ಶಾಸಕರಾದ ಶ್ರೀ ಲಕ್ಷ್ಮಣ ಸವದಿಯವರು ರಾಜ್ಯದಲ್ಲಿ

ಬೆಳಗಾವಿ ಜಿಲ್ಲೆ ಸಹಕಾರ ಕ್ಷೇತ್ರಕ್ಕೆ ವಿಶೇಷವಾಗಿ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಬೆಳಗಾವಿಯಲ್ಲಿ ದಾವಾ ಪಂಚಾಯಿತಿ ನ್ಯಾಯಾಲಯದ ಸಂಚಾರಿ ನ್ಯಾಯಪೀಠಗಳ ಉದ್ಘಾಟನೆ ಸ್ವಾಗತಾರ್ಹ ಹಾಗೂ ಸಂತೋಷದಾಯಕವಾಗಿದೆ. ಮುಂದಿನ ದಿನಗಳಲ್ಲಿ ಸಂಚಾರಿ ನ್ಯಾಯಪೀಠದ ಬದಲಿಗೆ ಶಾಶ್ವತವಾಗಿ ನ್ಯಾಯಪೀಠವನ್ನು ಒದಗಿಸಲು ಕ್ರಮವಿಡಬೇಕೆಂದು ಮಾನ್ಯ ಸಹಕಾರ ಸಚಿವರಲ್ಲಿ ಮನವಿ ಮಾಡಿದರು.

ಮುಂದುವರೆದು ಮಾತನಾಡಿದ ಅವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಜನರ ವಿಶ್ವಾಸಾರ್ಹತೆಯನ್ನು ಗಳಿಸುವಲ್ಲಿ ಯಶಸ್ವಿಯಾಗಿವೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸೌಹಾರ್ದ ಸಹಕಾರಿ ಸಂಸ್ಥೆಗಳು ಬೆಳೆಯಲಿ ಎಂದು ಹಾರೈಸುತ್ತಾ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯವರನ್ನು ಅಭಿನಂದಿಸಿದರು.

## ಸೌಹಾರ್ದ ಸಹಕಾರಿ ಮೂಲ ಕಾಯ್ದೆ ಆಶಯ ಜಾರಿಗೆ ಮನವಿ – ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ.,

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಪ್ರಾಸ್ತವಿಕ ಭಾಷಣ ಮಾಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆಗಳನ್ನು ಹಾಗೂ ಬೆಳವಣಿಗೆಗಳ ಬಗ್ಗೆ ತಿಳಿಸಿದರು. ರಾಜ್ಯದಲ್ಲಿ ಪ್ರಸ್ತುತ 4100ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಹಣೆಯಲ್ಲಿ ಇತ್ತೀಚಿನ ತಿದ್ದುಪಡಿಗಳಿಂದಾಗಿ ತೊಂದರೆಗಳಾಗಿವೆ. ಈ ತೊಂದರೆಗಳ ನಿವಾರಣೆಗಾಗಿ, ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಅನುಗುಣವಾಗಿ ತಿದ್ದುಪಡಿಗಳನ್ನು ಮಾಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯಲ್ಲಿ ಆಗುತ್ತಿರುವ ತೊಂದರೆಗಳನ್ನು ನಿವಾರಿಸಲು ಮನವಿ ಸಲ್ಲಿಸಲಾಯಿತು. ಅದೇ ರೀತಿ, ಸೌಹಾರ್ದ ಸಹಕಾರಿಗಳಿಗೆ ಹಾಗೂ ಕ್ರೆಡಿಟ್ ಸಹಕಾರಿ ಸಂಸ್ಥೆಗಳಿಗೆ ಆದಾಯ ತೆರಿಗೆ ಕಾಯ್ದೆಯಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಕೇಂದ್ರದ ಹಣಕಾಸು ಸಚಿವರ ಗಮನಕ್ಕೆ ತಂದು ತೊಂದರೆಗಳ ನಿವಾರಣೆಗೆ ಸಹಾಯ ಮಾಡಬೇಕೆಂದು ಡಾ॥ ಪ್ರಭಾಕರ ಕೋರೆಯವರಿಗೆ ಮನವಿಯನ್ನು ಸಲ್ಲಿಸಲಾಯಿತು.



ಮಾನ್ಯ ಅಧ್ಯಕ್ಷರಿಂದ ಪ್ರಾಸ್ತವಿಕ ಭಾಷಣ

## ಸಹಕಾರ ಸಂಸ್ಥೆಗಳು ಆದಾಯ ತೆರಿಗೆ ಕಾಯ್ದೆ ಕಿರುಕುಳದಿಂದ ಮುಕ್ತಗೊಳಿಸಲು ಕೇಂದ್ರಕ್ಕೆ ಆಗ್ರಹಪಡಿಸಲು ಕ್ರಮ - ಡಾ॥ ಪ್ರಭಾಕರ ಕೋರೆ



ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ॥ ಪ್ರಭಾಕರ ಕೋರೆಯವರು ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜನರಲ್ಲಿ ಉತ್ತಮ ಭಾವನೆಯನ್ನು ಬೆಳೆಸುವ ಕಾರ್ಯ ಆಗಬೇಕಾಗಿದೆ. ಸೌಹಾರ್ದ ಸಹಕಾರಿಗಳಾಗಲಿ, ಸಹಕಾರಿ ಸಂಸ್ಥೆಗಳಾಗಲಿ ಜನರ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದು ಬಹಳ ಕಷ್ಟವಾಗುತ್ತಿದೆ. ಯಾವುದೋ ಒಂದು ಸಹಕಾರಿ ಸಂಸ್ಥೆಯಲ್ಲಿ ಹಣಕಾಸಿನ ದುರುಪಯೋಗವಾದರೆ ಉಳಿದೆಲ್ಲಾ ಸಹಕಾರಿ ಸಂಸ್ಥೆಗಳಿಗೂ ಕೂಡ ಅದೇ ರೀತಿಯ ಮಾನದಂಡವನ್ನು ನಿಗದಿ ಮಾಡುವುದು ಸರಿಯಾದ ವ್ಯವಸ್ಥೆ ಅಲ್ಲ.

ಇದರಿಂದ ತೊಂದರೆಗಳಾಗುತ್ತಿದ್ದು, ಹೀಗಾಗಿ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಪೂರಕವಾಗುವ ತಿದ್ದುಪಡಿಗಳನ್ನು ಸರ್ಕಾರ ಅಗತ್ಯವಾಗಿ ಮಾಡಬೇಕು. ಕೇಂದ್ರದಲ್ಲಿ ಆದಾಯ ತೆರಿಗೆ ಕಾನೂನಿನ ಕೆಲವು ಅಂಶಗಳಿಂದ ಸಹಕಾರಿಗಳ ಕಾರ್ಯನಿರ್ವಹಣೆಗೆ ಉಂಟಾಗುತ್ತಿರುವ ಸಮಸ್ಯೆಗಳ ನಿವಾರಣೆಗೆ ಕೇಂದ್ರದ ಹಣಕಾಸು ಮಂತ್ರಿಗಳನ್ನು ಭೇಟಿ ಮಾಡಿ, ವಿಷಯ ವಿವರಿಸಿ, ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದಾಗಿ ತಿಳಿಸಿದರು.

## ಸಹಕಾರ ಸಂಸ್ಥೆಗಳ ಸ್ವಾಯತ್ತ ಕಾರ್ಯನಿರ್ವಹಣೆಗೆ ಪೂರಕ ಕಾಯ್ದೆಗಳು ಅಗತ್ಯ - ಶ್ರೀ ಮಹಾಂತೇಶ ಕವಟಗಿಮಠ, ಮಾನ್ಯ ವಿಧಾನ ಪರಿಷತ್ ಸದಸ್ಯರು

ಮುಖ್ಯ ಅತಿಥಿಗಳಾಗಿ ಆಗಮಿದ್ದ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಕವಟಗಿಮಠರವರು ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರರವರು ಮಾತನಾಡಿದರು. ಈ ಸಂಚಾರಿ ನ್ಯಾಯಪೀಠಗಳ ಪೀಠಾಧಿಕಾರಿ ಶ್ರೀಮತಿ ಕೆ.ಎಂ.ಆಶಾರವರು ಉಪಸ್ಥಿತರಿದ್ದರು.





## ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಧಕ್ಕೆ ತರುವ ಕ್ರಮ ಸಲ್ಲದು - ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ವೇದಿಕೆಯಲ್ಲಿ ಹಿರಿಯ ಸಹಕಾರಿ ಹಾಗೂ ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ಲಿ., ಬೋರಗಾಂವ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾವಾಸಾಹೇಬ ಅ. ಪಾಟೀಲ, ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಜಿ.ಎನ್.ಪಾಟೀಲ, ಶ್ರೀ ಎಂ.ಬಿ.ಕಲಾಲ, ಶ್ರೀ ಚಂದ್ರಕಾಂತ ಪಡಚಣ್ಣನವರ, ಶ್ರೀ ಸಂಜೀವ



ಮಾನ್ಯ ಉಪಾಧ್ಯಕ್ಷರಿಂದ ಸ್ವಾಗತ ಭಾಷಣ



ಶ್ರೀ ಸ್ರಿದಾಮಪ್ಪ ಉಪ್ಪಿನರವರಿಂದ ವಂದನಾರ್ಪಣೆ

ಮಹಾಜನ, ಶ್ರೀ ಶ್ರೀಧರ, ಶ್ರೀಮತಿ ಸರಸ್ವತಿ ಹಾಗೂ ಶ್ರೀ ಆರ್.ಎಸ್.ದೇಶಪಾಂಡೆ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಎಲ್ಲಾ ಅತಿಥಿ ಗಣ್ಯರನ್ನು ಸ್ವಾಗತಿಸಿದರು.

ಸಭೆಯಲ್ಲಿ ಬೆಳಗಾವಿ ವಿಭಾಗದ 1300ಕ್ಕೂ ಹೆಚ್ಚು ಸಹಕಾರಿ ಪ್ರತಿನಿಧಿಗಳು, ಸಹಕಾರಿ ಇಲಾಖೆಯ ಅಧಿಕಾರಿಗಳು, ಹಿರಿಯ ಸಹಕಾರಿ ಧುರೀಣರು ಭಾಗವಹಿಸಿದ್ದರು. ಸದರಿ ಸಮಾರಂಭದ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸ್ರಿದಾಮಪ್ಪ ಉಪ್ಪಿನರವರು ನೆರವೇರಿಸಿದರು.

## 64ನೇ ಅಖಿಲ ಭಾರತ ಸಹಕಾರ ಸಪ್ತಾಹ - 2017 : ಪೂರ್ವಭಾವಿ ಸಿದ್ಧತಾ ಸಭೆ





64ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯು ದಿನಾಂಕ 06.10.2017ರಂದು ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ದಿನಾಂಕ 09.10.2017ರಂದು ಮಾನ್ಯ ನಿಬಂಧಕರ ಅಧ್ಯಕ್ಷತೆಯಲ್ಲಿ ನಡೆದು ದಿನಾಂಕ 18.10.2017ರಂದು "ತಾಂತ್ರಿಕ ಜಾಗೃತಿ ಮತ್ತು ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ದಿನವನ್ನು ತುಮಕೂರಿನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು ಹಾಗೂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಒಕ್ಕೂಟ, ಜಿಲ್ಲಾ ಸಹಕಾರ ಯೂನಿಯನ್ ನಿ., ಹಾಗೂ ಜಿಲ್ಲೆಯ ಕೃಷಿ, ಹಾಲು, ವಸತಿ, ಗ್ರಾಹಕ, ಟಿ.ಎ.ಪಿ.ಸಿ.ಎಮ್.ಎಸ್.ಗಳು, ಪೀಕಾರ್ಡ್ ಬ್ಯಾಂಕುಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಮಹಿಳಾ ಸಹಕಾರ ಸಂಸ್ಥೆಗಳು, ವಸತಿ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಸಂಸ್ಥೆಗಳು ಮತ್ತು ಇತ್ಯಾದಿ ಸಹಕಾರ ಸಂಸ್ಥೆಗಳ ಸಹಯೋಗದೊಂದಿಗೆ ಆಚರಿಸಲು ತೀರ್ಮಾನಿಸಲಾಗಿದೆ.

ಈ ಹಿನ್ನೆಲೆಯಲ್ಲಿ ದಿನಾಂಕ 18.11.2017ರಂದು ತುಮಕೂರಿನಲ್ಲಿ ಮಾನ್ಯ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರು ಮತ್ತು ತುಮಕೂರು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಕೆ.ಎನ್.ರಾಜಣ್ಣರವರ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರುಗಳ ಅಧ್ಯಕ್ಷತೆಯಲ್ಲಿ ಹಾಗೂ ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಎಮ್.ಡಿ.ನರಸಿಂಹಮೂರ್ತಿ, ಬೆಂಗಳೂರು ಪ್ರಾಂತ, ಶ್ರೀ ಹೆಚ್.ಬಾಲಶೇಖರ, ಜಂಟಿ ನಿಬಂಧಕರು, ಕಾನೂನು ಕೋಶ, ನಿಬಂಧಕರ ಕಛೇರಿ, ಶ್ರೀ ಟಿ.ವಿ.ನರಸಿಂಹಮೂರ್ತಿ, ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಡಿ.ಸಿ.ಸಿ. ಬ್ಯಾಂಕ್, ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೊಂಡವಾಡಿ ಚಂದ್ರಶೇಖರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮುನೇಗೌಡ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲ, ಜಿಲ್ಲಾ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ವೆಂಕಟೇಗೌಡ, ರಾಜ್ಯ ಮಹಾಮಂಡಳದ ನಿರ್ದೇಶಕರಾದ ಶ್ರೀ ಎನ್.ಗಂಗಣ್ಣ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯ, ಶ್ರೀ ಜಿ.ಆರ್.ವಿಜಯಕುಮಾರ, ಉಪನಿಬಂಧಕರು, ತುಮಕೂರು ಹಾಗೂ ಇನ್ನೂ ಅನೇಕ ಅಧಿಕಾರಿಗಳ ಹಾಗೂ ಸಹಕಾರಿಗಳ ಉಪಸ್ಥಿತಿಯಲ್ಲಿ ಪೂರ್ವಭಾವಿ ಸಿದ್ಧತಾ ಸಭೆಗಳು ನಡೆದು ಸಪ್ತಾಹದ ಆಚರಣೆಯ ವಿವರ ಹಾಗೂ ವ್ಯವಸ್ಥೆಗಳ ಬಗ್ಗೆ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ.

**ಸಪ್ತಾಹದ 7 ದಿನಗಳ ವಿವರಗಳು**

| ದಿನಾಂಕ | ವಿವರಗಳು | ನೇತೃತ್ವ | ಸ್ಥಳ |
|---|---|---|---|
| 14–11–2017 | ಸಹಕಾರ ಕ್ಷೇತ್ರದ ಮೂಲಕ ಉತ್ತಮ ಆಡಳಿತ ನಿರ್ವಹಣೆ ಮತ್ತು ವೃತ್ತಿಪರತೆಯ ಅಭಿವೃದ್ಧಿ. | ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು, ಮಹಿಳಾ ಸಹಕಾರ ಮಹಾಮಂಡಳ ನಿ., ಬೆಂಗಳೂರು ಮತ್ತು ರಾಜ್ಯದ ಎಲ್ಲಾ ಸಹಕಾರ ಸಂಸ್ಥೆಗಳು ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಬೆಳಗಾವಿ |
| 15–11–2017 | ಉತ್ಪಾದಕರಿಂದ ಗ್ರಾಹಕರೆಡೆಗೆ ಸಹಕಾರ ಸಂಸ್ಥೆಗಳು. | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಗ್ರಾಹಕ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಮಂಗಳೂರು |
| 16–11–2017 | ಸಹಕಾರದ ಅಭಿವೃದ್ಧಿಗಾಗಿ ಕಾನೂನುಗಳ ರಚನೆ. | ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಸಹಕಾರ ಮಹಾಮಂಡಳ, ಲ್ಯಾಂಪ್ಸ್ ಸಹಕಾರ ಮಹಾಮಂಡಳ, ಮೀನುಗಾರರ ಸಹಕಾರ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಚಿಕ್ಕಬಳ್ಳಾಪುರ |
| 17–11–2017 | ಖಾಸಗಿ ಹಾಗೂ ಸಾರ್ವಜನಿಕರ ಸಹಭಾಗಿತ್ವದಲ್ಲಿ ಸಹಕಾರ ಸಂಸ್ಥೆಗಳು. | ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಸಕ್ಕರೆ ಕಾರ್ಖಾನೆಗಳ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಕೂಡಲ ಸಂಗಮ |
| 18–11–2017 | ಆರ್ಥಿಕ ಸೇರ್ಪಡೆ, ತಂತ್ರಜ್ಞಾನ, ನಗದು ರಹಿತ ವ್ಯವಹಾರಗಳ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ. | ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ತುಮಕೂರು |
| 19–11–2017 | ಆರ್ಥಿಕವಾಗಿ ಹಿಂದುಳಿದವರಿಗಾಗಿ ಮತ್ತು ಅವಕಾಶ ವಂಚಿತರಿಗಾಗಿ ಸಹಕಾರ ಸಂಸ್ಥೆಗಳು. | ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ಬೆಂಗಳೂರು |
| 20–11–2017 | ಕೌಶಲ್ಯ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಮಹತ್ವದ ಪಾತ್ರ | ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು. | ರಾಯಚೂರು |

## ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಿನಾಂಕ 18 ನವೆಂಬರ್ 2017ರಂದು ತುಮಕೂರಿನಲ್ಲಿ ಆಚರಿಸಲಾಗುತ್ತಿರುವ "ತಾಂತ್ರಿಕ ಜಾಗೃತಿ ಮತ್ತು ನಗದು ರಹಿತ ಪಾವತಿ ಮೂಲಕ ಆರ್ಥಿಕ ಸೇರ್ಪಡೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ದಿನಾಚರಣೆಯ ವಿವರಗಳು

**ಸ್ಥಳ : ಗಾಜಿನ ಮನೆ, ಅಮಾನಿಕೆರೆ ಮೈದಾನ, ಜಿಲ್ಲಾಧಿಕಾರಿ ಕಛೇರಿ ಎದುರು, ತುಮಕೂರು, ಸಮಯ : ಬೆಳಿಗ್ಗೆ 11.00 ಗಂಟೆಗೆ**

ಉದ್ಘಾಟನೆ : **ಶ್ರೀ ರಮೇಶ ಜಾರಕಿಹೊಳಿ,** ಮಾನ್ಯ ಸಹಕಾರ ಸಚಿವರು.
ಅಧ್ಯಕ್ಷತೆ : **ಶ್ರೀ ಕೆ.ಎನ್. ರಾಜಣ್ಣ,** ಮಾನ್ಯ ಶಾಸಕರು ಹಾಗೂ ಅಧ್ಯಕ್ಷರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ., ತುಮಕೂರು.
ಸಹಕಾರಿ ಧ್ವಜಾರೋಹಣ : **ಶ್ರೀ ಟಿ.ಬಿ. ಜಯಚಂದ್ರ,** ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾನೂನು ಸಚಿವರು.
ಸಹಕಾರಿ ಸಂಸ್ಥೆಗಳಿಗೆ ಸನ್ಮಾನ ಕಾರ್ಯಕ್ರಮ : **ಡಾ. ಶೇಖರಗೌಡ ಮಾಲೀ ಪಾಟೀಲ,** ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು.
"ಸಹಕಾರ" ವಿಶೇಷ ಸಂಚಿಕೆ ಬಿಡುಗಡೆ : **ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ,** ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.
"ಸ್ವಾಭಿಮಾನಿ ಸಹಕಾರಿ" ಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ : **ಶ್ರೀ ಕೆ. ಷಡಕ್ಷರಿ,** ಮಾನ್ಯ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ಬೆಂಗಳೂರು.
ವಸ್ತು ಪ್ರದರ್ಶನ ಉದ್ಘಾಟನೆ : **ಶ್ರೀ ಮುದ್ದುಹನುಮೆಗೌಡ,** ಮಾನ್ಯ ಲೋಕಸಭಾ ಸದಸ್ಯರು, ತುಮಕೂರು.
ಸಹಕಾರಿ ಸಂಸ್ಥೆಗಳಿಗೆ ಸನ್ಮಾನ : **ಶ್ರೀ ರಫೀಕ ಅಹಮದ್,** ಮಾನ್ಯ ಶಾಸಕರು, ತುಮಕೂರು.
ಮುಖ್ಯ ಅತಿಥಿಗಳು : **ಶ್ರೀ ಎಮ್.ಕೆ. ಅಯ್ಯಪ್ಪ,** ಮಾನ್ಯ ಸಹಕಾರಿಗಳ ನಿಬಂಧಕರು.

**: ಕಾರ್ಯಕ್ರಮಗಳ ವಿವರಗಳು :**

ಬೆಳಿಗ್ಗೆ 9–30 ರಿಂದ 10–30ರವರೆಗೆ : ಗುಮಚಿ ಸರ್ಕಲ್‌ನಿಂದ ಗಾಜಿನ ಮನೆಯವರೆಗೆ ಜಾನಪದ ಕಲಾ ತಂಡಗಳೊಂದಿಗೆ ಸಹಕಾರಿಗಳ ಜಾಥಾ.
ಬೆಳಿಗ್ಗೆ 9–30 ರಿಂದ 10–30ರವರೆಗೆ : ಸುಗಮ ಸಂಗೀತ – **ಶ್ರೀ ಕೆಂಕೆರೆ ಮಲ್ಲಿಕಾರ್ಜುನ ಹಾಗೂ ತಂಡದವರಿಂದ.**
ಬೆಳಿಗ್ಗೆ 10–30 : ಸಹಕಾರಿ ಧ್ವಜಾರೋಹಣ.
ಬೆಳಿಗ್ಗೆ 10–50 : ಸಹಕಾರಿ ವಸ್ತು ಪ್ರದರ್ಶನ ಮಳಿಗೆಗಳ ಉದ್ಘಾಟನೆ.
ಬೆಳಿಗ್ಗೆ 11–00 ರಿಂದ 1–30ರವರೆಗೆ : **ಸಪ್ತಾಹದ ಉದ್ಘಾಟನೆ ಹಾಗೂ ಕಾರ್ಯಕ್ರಮಗಳು :** ಸಹಕಾರ ವಾರ ಪತ್ರಿಕೆ ಹಾಗೂ ಸ್ವಾಭಿಮಾನಿ ಸಹಕಾರಿಯ ವಿಶೇಷ ಸಂಚಿಕೆಗಳ ಬಿಡುಗಡೆ, ತುಮಕೂರು ಜಿಲ್ಲೆಯ ಉತ್ತಮ ಕೃಷಿ, ಹಾಲು, ಮಹಿಳಾ, ಗ್ರಾಹಕ, ವಸತಿ, ಪಟ್ಟಣ ಸಹಕಾರ ಬ್ಯಾಂಕುಗಳ, ಕ್ರೆಡಿಟ್, ಸೌಹಾರ್ದ ಸಹಕಾರಿಗಳ, ಟಿ.ಎ.ಪಿ.ಸಿ.ಎಮ್.ಎಸ್.ಗಳ, ಪೀಕಾರ್ಡ್ ಬ್ಯಾಂಕುಗಳಿಗೆ ಸನ್ಮಾನ, ಸೌಹಾರ್ದ ಸಹಕಾರಿ ಕ್ಷೇತ್ರದ 5 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಹಾಗೂ 5 ಉತ್ತಮ ಸಹಕಾರಿಗಳಿಗೆ ರಾಜ್ಯ ಮಟ್ಟದ ಸನ್ಮಾನ.
ಮಧ್ಯಾಹ್ನ 2–30 ರಿಂದ 4–00ರವರೆಗೆ : ಸಪ್ತಾಹದ ವಿಷಯಗಳ ಕುರಿತು ಶ್ರೀ ಬಿ.ಎ.ಮಹದೇವಪ್ಪರವರಿಂದ ಉಪನ್ಯಾಸ.

**ತುಮಕೂರು ಜಿಲ್ಲೆಯ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳ ಸೌಹಾರ್ದ ಸಹಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಪ್ತಾಹದ ಆಚರಣೆಯನ್ನು ಯಶಸ್ವಿಗೊಳಿಸಲು ಸಹಕರಿಸಲು ಕೋರಿದೆ.**

ಬೆಂಗಳೂರು ವಿಭಾಗ :

## ಸೌಹಾರ್ದ ಸಹಕಾರಿಗಳಲ್ಲಿ ಶಾಸನಬದ್ಧ ಅಂಶಗಳು ಮತ್ತು ಕರ್ತವ್ಯಗಳು ಹಾಗೂ ಆದಾಯ ತೆರಿಗೆ ಕುರಿತು ತರಬೇತಿ

**ತೀರ್ಥಹಳ್ಳಿ :** ದಿನಾಂಕ : 07.10.2017ರಂದು ರಾಮ ಮಂದಿರ ರಥ ಬೀದಿ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ ಇಲ್ಲಿ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯ ನಿರ್ವಾಹಕರುಗಳಿಗಾಗಿ "ಸೌಹಾರ್ದ ಸಹಕಾರಿಗಳಲ್ಲಿ ಶಾಸನಬದ್ಧ ಅಂಶಗಳು ಮತ್ತು ಕರ್ತವ್ಯಗಳು ಹಾಗೂ ಆದಾಯ ತೆರಿಗೆ ಕುರಿತು" ತರಬೇತಿಯನ್ನು ಆಯೋಜಿಸಲಾಗಿತ್ತು. ಈ ತರಬೇತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎ.ಆರ್.ಪ್ರಸನ್ನ ಕುಮಾರ್ ಮತ್ತು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ ಇದರ ಅಧ್ಯಕ್ಷರಾದ ಶ್ರೀ ಬಿ.ಎಸ್. ಅಶ್ವತ್ ಹಾಗೂ ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಶ್ರೀ ಹೆಚ್.ವಿ.ರವಿಕುಮಾರ ಮತ್ತು ಬೆಂಗಳೂರು ವಿಭಾಗೀಯ ಅಧಿಕಾರಿಯಾದ ಶ್ರೀ ಸೂರ್ಯಕಾಂತ ರ್‍ಯಾಕಲೆರವರು ಭಾಗವಹಿಸಿದ್ದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀ ಬಿ.ವಿ.ರವೀಂದ್ರನಾಥರವರು



ಜಿ.ಎಸ್.ಟಿ. ತೆರಿಗೆ ಕಾಯ್ದೆ ಕುರಿತು ಮತ್ತು ಶ್ರೀ ರವೀಶ್.ಪಿ.ಜಿ.ರವರು ಸಹಕಾರಿಗಳಲ್ಲಿ ಆದಾಯ ತೆರಿಗೆ ಕುರಿತು ಉಪನ್ಯಾಸ ನೀಡಿದರು. ಈ ತರಬೇತಿಯಲ್ಲಿ ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕುಗಳಿಂದ 25 ಸೌಹಾರ್ದ ಸಹಕಾರಿಗಳಿಂದ 85 ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

ಬೆಳಗಾವಿ ವಿಭಾಗ :

## ಸಂಪರ್ಕ ಸಭೆ

**ಗದಗ :** ದಿನಾಂಕ : 25.10.2017ರಂದು ಗದಗ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರುಗಳಿಗಾಗಿ ಕೃಷಿ ವಿಜ್ಞಾನ ಕೇಂದ್ರ, ಹುಲಕೋಟಿ ಇಲ್ಲಿ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ವಹಿಸಿದ್ದರು.

ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ನಿರ್ದೇಶಕರಾದ ಶ್ರೀ ಆರ್.ಎಸ್.ದೇಶಪಾಂಡೆ ಮತ್ತು ಮುನಿಪುರ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಗದಗ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ವಿ.ಬಳಗಾನೂರ, ಎ.ಪಿ.ಎಂ.ಸಿ ಹಾಗೂ ಮುಳಗುಂದ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮುಳಗುಂದ ಬ್ಯಾಂಕಿನ



ಅಧ್ಯಕ್ಷರಾದ ಶ್ರೀ ಸಿ.ಬಿ.ಬಡ್ನಿ ಇವರುಗಳು ಉಪಸ್ಥಿತರಿದ್ದರು. ಸಭೆಯಲ್ಲಿ 27 ಸೌಹಾರ್ದ ಸಹಕಾರಿಗಳಿಂದ 50 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಲಬುರಗಿ ವಿಭಾಗ :

## ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ

**ಕಲಬುರಗಿ :** ದಿನಾಂಕ : 16.10.2017ರಂದು ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಹೆಚ್.ಕೆ.ಸಿ.ಸಿ. ಸಭಾಂಗಣ, ಕಲಬುರಗಿ ಜಿಲ್ಲೆ ಇಲ್ಲಿ "ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು. ಸದರಿ ಸಭೆಯನ್ನು ಸಹಕಾರ ಭಾರತಿಯ ರಾಷ್ಟ್ರೀಯ ಸಂಪರ್ಕ ಪ್ರಮುಖರಾದ ಶ್ರೀ ರಮೇಶ ವೈದ್ಯ ಇವರು ಉದ್ಘಾಟಿಸಿದರು. ಶ್ರೀ ಶರಣಗೌಡ ಜಿ. ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಉಪಸ್ಥಿತರಿದ್ದರು. ತರಬೇತಿಯ ಅವಧಿಯಲ್ಲಿ ಸಹಕಾರಿ ಚಳುವಳಿ ಅಂದು ಇಂದು ಮುಂದು ಎಂಬ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥರವರು ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ



66 ಸೌಹಾರ್ದ ಸಹಕಾರಿಗಳಿಂದ 112 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.

# ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ

**ಬೀದರ :** ದಿನಾಂಕ 17.10.2017ರಂದು ಬೀದರ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಶಾರದಾ ರುಡ್‌ಸೆಟ್, ಬೀದರ ಜಿಲ್ಲೆ ಇಲ್ಲಿ "ತರಬೇತಿ ಕಾರ್ಯಕ್ರಮ ಮತ್ತು ಸಂಪರ್ಕ ಸಭೆ"ಯನ್ನು ಆಯೋಜಿಸಲಾಗಿತ್ತು.

ಈ ತರಬೇತಿಯನ್ನು ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ಗುರುನಾಥ ಜ್ಯಾಂತಿಕರ, ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಉಪಸ್ಥಿತರಿದ್ದರು.

ಹಿರಿಯ ಸಹಕಾರಿಗಳಾದ ಶ್ರೀ ರಮೇಶ ವೈದ್ಯ, ಶ್ರೀ ನಾಗಲಿಂಗ ಪತ್ತಾರ್ ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ



ಸಂಜೀವಕುಮಾರ್ ಪಾಟೀಲ್ ಇವರುಗಳು ಭಾಗವಹಿಸಿದ್ದರು. ತರಬೇತಿ ಅವಧಿಯಲ್ಲಿ ಸಹಕಾರಿಗಳಿಗೆ ಅನ್ವಯಿಸುವ ತೆರಿಗೆ ಕಾನೂನುಗಳಲ್ಲಿ ಆದ ಇತ್ತೀಚಿನ ಬದಲಾಣೆಗಳು ಎಂಬ ವಿಷಯದ ಕುರಿತು ಸನ್ನದು ಲೆಕ್ಕಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ ಇವರು ಉಪನ್ಯಾಸ ನೀಡಿದರು. ತರಬೇತಿಯಲ್ಲಿ 40 ಸೌಹಾರ್ದ ಸಹಕಾರಿಗಳಿಂದ 74 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನ ಪಡೆದುಕೊಂಡರು.



# ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮ

ದಿನಾಂಕ : 16.10.2017ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರೂ ಸೇರಿದಂತೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಕಲಬುರಗಿ ವಿಭಾಗದಿಂದ ಆಯ್ಕೆಯಾಗಿರುವ ಎಲ್ಲಾ ನಿರ್ದೇಶಕರುಗಳಿಗೆ ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳ ಸೌಹಾರ್ದ ಸಹಕಾರಿಗಳಿಂದ ಸನ್ಮಾನ ಮತ್ತು ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

# ಪತ್ರಿಕಾ ಗೋಷ್ಠಿ

**ಕಲಬುರಗಿ :** ದಿನಾಂಕ : 16.10.2017ರಂದು ಪತ್ರಿಕಾ ಭವನ, ಕಲಬುರಗಿ ಇಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರ ಅಧ್ಯಕ್ಷತೆಯಲ್ಲಿ ಪತ್ರಿಕಾ ಗೋಷ್ಠಿಯು ನಡೆಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಸಂಯುಕ್ತ ಸಹಕಾರಿಯ ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ಮತ್ತು ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವಿಭಾಗೀಯ ಅಧಿಕಾರಿಗಳಾದ ಶ್ರೀ ಸಂಜಯ ಕೋರಟಕರವರು ಉಪಸ್ಥಿತರಿದ್ದರು.




ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ನಡೆದ ಸಾಮಾನ್ಯ ಚುನಾವಣೆ ಕುರಿತು, ಅನುಮೋದಿತ ಕ್ರಿಯಾಯೋಜನೆ ಹಾಗೂ ದಿನಾಂಕ 24.10.2017ರಂದು ಉದ್ಘಾಟನೆಗೊಳ್ಳುತ್ತಿರುವ ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಂಚಾರಿ ಪೀಠದ ಕುರಿತಾದ ವಿಷಯಗಳನ್ನು ಅಧ್ಯಕ್ಷರು ಪತ್ರಕರ್ತರ ಮುಂದೆ ಮಂಡಿಸಿದರು.

## ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರುಗಳ ಭೇಟಿ

**ಕಲಬುರಗಿ :** ದಿನಾಂಕ : 16.10.2017ರಂದು ಸಿದ್ಧಿವಿನಾಯಕ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಹಾಗೂ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸನ್ಮಾನಿಸಲಾಯಿತು.





**ಕಲಬುರಗಿ :** ದಿನಾಂಕ 16.10.2017ರಂದು ಅಣ್ಣ ಬಸವಣ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ಕಲಬುರಗಿ ಜಿಲ್ಲೆಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸಹಕಾರಿಯ ಆರ್ಥಿಕ ಬೆಳವಣಿಗೆಯ ಕುರಿತು ಹಾಗೂ ಸಹಕಾರಿಯ ಸಿಬ್ಬಂದಿಗಳೊಂದಿಗೆ ಸಮಾಲೋಚನೆಯನ್ನು ನಡೆಸಿದರು.

**ಕಲಬುರಗಿ :** ದಿನಾಂಕ 16.10.2017ರಂದು ಓಂ ಶ್ರೀ ವೀರಭದ್ರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸಹಕಾರಿಯ ಆರ್ಥಿಕ ಬೆಳವಣಿಗೆಯ ಕುರಿತು ಚರ್ಚೆ ಹಾಗೂ ಸಹಕಾರಿಯ ಸಿಬ್ಬಂದಿಗಳೊಂದಿಗೆ ಸಮಾಲೋಚನೆಯನ್ನು ನಡೆಸಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸನ್ಮಾನಿಸಲಾಯಿತು.





**ಕಲಬುರಗಿ :** ದಿನಾಂಕ : 16.10.2017ರಂದು ಗುಲ್ಬರ್ಗಾ ಮಹಿಳಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕಲಬುರಗಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರು ಸಹಕಾರಿಯು ನಡೆಸುವ ಇತರ ಚಟುವಟಿಕೆಗಳ ಕುರಿತು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಶೈಲಜಾ ವಿ. ತಪಲಿ ಇವರಿಂದ ಮಾಹಿತಿಯನ್ನು ಪಡೆದರು ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷರನ್ನು ಸನ್ಮಾನಿಸಲಾಯಿತು.

**ಬೀದರ :** ದಿನಾಂಕ : 17.10.2017ರಂದು ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸನ್ಮಾನಿಸಲಾಯಿತು.





**ಬೀದರ :** ದಿನಾಂಕ : 17.10.2017ರಂದು ಪಂಡಿತ ದೀನದಯಾಳ ಉಪಾಧ್ಯಾಯ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭೇಟಿ ನೀಡಿದರು. ಇದೇ ಸಂದರ್ಭದಲ್ಲಿ ಸಂಜೆವಾಣಿ ದಿನಪತ್ರಿಕೆಯ ದೀಪಾವಳಿ ವಿಶೇಷಾಂಕ ಪುರವಣಿಯನ್ನು ಬಿಡುಗಡೆ ಮಾಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸನ್ಮಾನಿಸಲಾಯಿತು.

**ಬೀದರ :** ದಿನಾಂಕ 17.10.2017ರಂದು ಭಾರತ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಸಹಕಾರಿಗೆ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಸಂಜೀವ ಮಹಾಜನ, ಶ್ರೀ ಆರ್.ತಿಮ್ಮಯ್ಯಶೆಟ್ಟಿ, ಶ್ರೀ ಜಿ.ಶ್ರೀಧರ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರುಗಳು ಭೇಟಿ ನೀಡಿದರು. ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿರವರಿಗೆ ಸನ್ಮಾನಿಸಲಾಯಿತು.





ಶ್ರೀ ಶ್ರೀಧರಸ್ವಾಮಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಗೆ ಭೇಟಿ.




ಮದಕರಿ ಸೌಹಾರ್ದ ಸಹಕಾರಿ ನಿ., ರಂಗಸಮುದ್ರ ಸಹಕಾರಿಗೆ ಭೇಟಿ.



ಪ್ಯಾಟಸನ್ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಬೆಳಗಾವಿ ಸಹಕಾರಿಗೆ ಭೇಟಿ.

## ಸಂಯುಕ್ತ ಸಹಕಾರಿಯ ನಿರ್ದೇಶಕರ ವ್ಯಕ್ತಿ ಪರಿಚಯ ಭಾಗ – 5

### ಶ್ರೀ ಮಂಜುನಾಥ

ಮೈಸೂರು ವಿಭಾಗದ ಉಡುಪಿ ಜಿಲ್ಲೆಯ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ ಪ್ರತಿನಿಧಿಯಾದ ಶ್ರೀ ಮಂಜುನಾಥ ಶ್ರೀಯಾನ ಕೋಟಾರವರು ಸಂಯುಕ್ತ ಸಹಕಾರಿಯ ನೂತನ ಆಡಳಿತ ಮಂಡಲಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ತಂದೆ ಶ್ರೀ ನಾರಾಯಣ. ತಾಯಿ ಶ್ರೀಮತಿ ರಾಧಾ. ವ್ಯವಸಾಯ ಹಾಗೂ ಮೀನಾಗಾರಿಕೆಯ ಸುಸಂಸ್ಕೃತ ಕುಟುಂಬ. ಕೋಟಾದಲ್ಲಿ ದಿನಾಂಕ 27–07–1967ರಲ್ಲಿ ಜನಿಸಿದವರು. ಕೋಟಾದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ. ಸರಳ ಸಜ್ಜನಿಕೆಯ ಸ್ವಭಾವದ ಶ್ರೀಯುತರು ತಮ್ಮ ಕಾಲೇಜು ವ್ಯಾಸಂಗವನ್ನು ಉಡುಪಿಯಲ್ಲಿ ಪೂರೈಸಿ ಬಿ.ಕಾಂ., ಎಲ್.ಎಲ್.ಬಿ. ಮಾಡಿಕೊಂಡು ವಕೀಲಿ ಹಾಗೂ ನೋಟರಿ ವೃತ್ತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ.



ಕಳೆದ 25 ವರ್ಷದಿಂದ ಸಹಕಾರ ಕ್ಷೇತ್ರದಲ್ಲಿ ಸೇವೆ ಮಾಡುತ್ತಿರುವ ಶ್ರೀಯುತರು ಮಹಾಲಕ್ಷ್ಮೀ ಅರ್ಬನ್ ಕೋಆಪರೇಟಿವ್ ಬ್ಯಾಂಕ್, ಮೀನುಗಾರರ ಸಹಕಾರ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ, ಉಡುಪಿಯ ವಕೀಲರ ಸಹಕಾರ ಸಂಘದಲ್ಲಿ ಉಪಾಧ್ಯಕ್ಷರಾಗಿ, ಜಿಲ್ಲಾ ಸಹಕಾರ ಯೂನಿಯನ್, ಉಡುಪಿ ಇದರ ನಿರ್ದೇಶಕರಾಗಿ ಹೀಗೆ ಹಲವಾರು ವಿಧದ ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ, ಪದಾಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ ಪ್ರವರ್ತಕರಾಗಿ, ನಿರ್ದೇಶಕರಾಗಿ ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸ್ಥಾಪನೆಗೆ ಕಾರಣೀಕರ್ತರಾಗಿದ್ದಾರೆ.

ಸಹಕಾರವಲ್ಲದೇ ಶಿಕ್ಷಣ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸುವ ಪ್ರವೃತ್ತಿಯವರಾಗಿದ್ದಾರೆ. ಎಸ್.ಡಿ.ಎಮ್.ಸಿ. ಶಾಲೆಯ ಅಧ್ಯಕ್ಷರಾಗಿದ್ದಾರೆ. ಎನ್.ಜಿ.ಓ. ಗ್ರಾಮ ವಿಕಾಸ ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾರೆ. ರೋಟರಿ ಕ್ಲಬ್‌ನ ಪದಾಧಿಕಾರಿಯಾಗಿದ್ದಾರೆ.

ಉಡುಪಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 105 ಸೌಹಾರ್ದ ಸಹಕಾರಿಗಳಿದ್ದು, ಹಳೆಯ ಕಾಯ್ದೆಯಡಿಯಲ್ಲಿ 700 ಸಹಕಾರಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದಿಂದ ಬಡತನ ನಿರ್ಮೂಲನೆ ಸಾಧ್ಯ. ಈ ಕ್ಷೇತ್ರ ಬಡವರಿಗಾಗಿ ಮಾತ್ರ. ಶ್ರೀಮಂತರಿಗಾಗಿ ಅಲ್ಲ. ಯುವ ಜನಾಂಗದವರಿಗೆ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಬೆಳೆಯಲು ಮತ್ತು ಅವರಲ್ಲಿ ನಾಯಕತ್ವ ಬೆಳಸಿಕೊಳ್ಳಲು ಅವಕಾಶವಿದೆ. ಈ ಬಗ್ಗೆ ಸಹಕಾರಿ ಸಂಸ್ಥೆಗಳು ಸಾರ್ವಜನಿಕರಿಗೆ ಸಹಕಾರ ಕ್ಷೇತ್ರದ ಪ್ರಚಾರ ಅಭಿಯಾನವನ್ನು ನಡೆಸಬೇಕು ಮತ್ತು ಪತ್ರಿಕೆಯವರೊಡನೆ ನಿಕಟ ಸಂಪರ್ಕವನ್ನು ಹೊಂದಿ ಈ ಕ್ಷೇತ್ರಕ್ಕೆ ಹೆಚ್ಚಿನ ಪ್ರಚಾರ ನೀಡುವುದು ಅಗತ್ಯ ಎಂದು ಅಭಿಪ್ರಾಯ ಪಡುತ್ತಾರೆ ಶ್ರೀಯುತರು.

### ಶ್ರೀ ವೈ.ಟಿ.ಪಾಟೀಲ



ಸಂಯುಕ್ತ ಸಹಕಾರಿಯ ಕಲಬುರಗಿ ವಿಭಾಗೀಯ ನಿರ್ದೇಶಕರಾಗಿ ಮರು ಆಯ್ಕೆಯಾಗಿರುವ ಶ್ರೀ ಯಮನಪ್ಪ ತಮ್ಮನಗೌಡ ಪಾಟೀಲರವರು ಕೆಂಭಾವಿಯ ಕಾಮಧೇನು ಸೌಹಾರ್ದ ಸಹಕಾರಿಯ ಅಧ್ಯಕ್ಷರು. ಸಹಕಾರ ಕ್ಷೇತ್ರದ ಮೂಲಕ ಸಮಾಜದ ಅತ್ಯಂತ ಕಟ್ಟಕಡೆಯ ವ್ಯಕ್ತಿಗೆ ನೆರವಾಗಲು ಸಾಧ್ಯವೆಂಬ ಸತ್ಯವನ್ನು ಅರಿತ ನಂತರ ಸಹಕಾರ ಕ್ಷೇತ್ರದ ಸಂಪೂರ್ಣ ಮಾಹಿತಿ ಪಡೆಯುವುದಕ್ಕಾಗಿ ಮೈಸೂರಿನಲ್ಲಿ ನಡೆದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಹಕಾರಿ ಆಡಳಿತ, ಸಹಕಾರಿ ತತ್ವಗಳು, ಸಹಕಾರಿ ಲೆಕ್ಕಪತ್ರಗಳು, ಸಹಕಾರಿ ಪರಿಸರ ಮುಂತಾದ ವಿಷಯಗಳನ್ನು ತಿಳಿದುಕೊಂಡು ಕಾಮಧೇನು ಸೌಹಾರ್ದ ಸಹಕಾರಿಯನ್ನು ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಕೃಷಿ ಕುಟುಂಬದಲ್ಲಿ 1948ರಲ್ಲಿ ಜನನ. ಬಿಎಸ್ಸಿ ಪದವೀಧರರಾದ ಶ್ರೀಯುತರು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳದ ನಿವೃತ್ತ ಅಧಿಕಾರಿ. ಮಾರಾಟ ಮಹಾಮಂಡಳದಲ್ಲಿ ಉತ್ತಮ ಸೇವೆ ಸಲ್ಲಿಸಿ ಅಲ್ಲಿನ ಅಧಿಕಾರಿಗಳಿಂದ ಪ್ರಶಂಸೆಗೊಳಗಾದವರು. ಶ್ರೀಯುತರು ಸಹಕಾರ ಕ್ಷೇತ್ರದಲ್ಲಿ ಸುರಪೂರ ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘ, ಸುರಪೂರದಲ್ಲಿ ನಿರ್ದೇಶಕರಾಗಿ, ಕೆಂಭಾವಿ ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಘದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೃಷ್ಣಾ ರೈತರ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರಿ ಸಂಘ ನಿ., ಹುಣಶಿಗಿ ಇದರ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇಫ್ಕೋ ಸಂಸ್ಥೆಯಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ಕಲಬುರಗಿ ಪ್ರತಿನಿಧಿಯಾಗಿ 2014 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರವನ್ನು ಹೊರತುಪಡಿಸಿ ಶಿಕ್ಷಣ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಗ್ರಾಮೀಣಾಭಿವೃದ್ಧಿ ಹಾಗೂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ಶ್ರೀ ಮಹಾ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪ್ರೌಢಶಾಲೆ (ಆಂಗ್ಲ ಮಾಧ್ಯಮ) ಇದರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

### ಶ್ರೀ ಜಿ. ನಂಜನಗೌಡ



ವೃತ್ತಿಯಲ್ಲಿ ಸನ್ನದು ಲೆಕ್ಕಪರಿಶೋಧಕರು (ಚಾರ್ಟೆರ್ಡ್ ಅಕೌಂಟೆಂಟ್), ಪ್ರವೃತ್ತಿಯಲ್ಲಿ ಸಹಕಾರಿಗಳು ಹಾಗೂ ಕೃಷಿಕರು. ಸಮಾಜದ ಹಿಂದುಳಿದ ವರ್ಗದ ಹಾಗೂ ದೀನದಲಿತರ ಬಗ್ಗೆ ಅಪಾರ ಕಾಳಜಿ ಇರುವ ಶ್ರೀಯುತರು ಸಹಕಾರ ಕ್ಷೇತ್ರ ಸಾಮಾನ್ಯ ಜನರನ್ನು ತಲುಪುವ ಏಕೈಕ ಮಾರ್ಗ, ಯಾವುದು ಬೇದಭಾವ ಹಾಗೂ ತಾರತಮ್ಯವಿಲ್ಲದೇ ಸಮಾಜದ ಕನಿಷ್ಠ ವರ್ಗದ ಜನರಿಗೆ ಸೇವೆ ಮಾಡಲು ಅವಕಾಶವಿರುವ ಕ್ಷೇತ್ರ ಇದಾಗಿದೆ. ಆದ್ದರಿಂದ, ಈ ಕ್ಷೇತ್ರದ ಕ್ರಿಯಾಶೀಲ ಸಹಕಾರಿಯಾಗಿ ಕಾರ್ಯ ನಿರ್ವಹಿಸುವ ನನಗೆ ಹೆಮ್ಮೆಯ ಹಾಗೂ ಗೌರವದ ವಿಷಯ ಎನ್ನುತ್ತಾರೆ ಶ್ರೀಯುತರು. ಈ ಕ್ಷೇತ್ರದ ಅಭಿವೃದ್ಧಿಗೆ ವಿಶೇಷವಾಗಿ ಮಹಿಳೆಯರು ಹಾಗೂ ಯುವಕರು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ಈ ಕ್ಷೇತ್ರದ ಬೆಳವಣಿಗೆಯ ವೇಗ ಹೆಚ್ಚುತ್ತದೆ ಹಾಗೂ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯ ಎನ್ನುತ್ತಾರೆ.

ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ತೀರನಹಳ್ಳಿಯಲ್ಲಿ ದಿನಾಂಕ : 01–06–1960ರಲ್ಲಿ ಜನಿಸಿದ ಶ್ರೀ ಜಿ.ನಂಜನಗೌಡ ಅವರು ತೀರನಹಳ್ಳಿಯಲ್ಲಿ ಪ್ರಾಥಮಿಕ ಶಿಕ್ಷಣ, ನಾಗರತಟ್ಟೆಯಲ್ಲಿ ಪ್ರೌಢ ಶಿಕ್ಷಣ, ಸಿರಿಗೆರೆಯ ಕಾಲೇಜು ಶಿಕ್ಷಣ ಮುಗಿಸಿದರು. ಶಿವಮೊಗ್ಗದ ಜಿ.ಕೆ. ಶೆಟ್ಟರ್ & ಸಿ.ಎ. ಇವರಲ್ಲಿ 1990ರಲ್ಲಿ ಸಿ.ಎ. ಆಗಿ ಪದವಿಯನ್ನು ಪೂರೈಸಿದ್ದಾರೆ. ಹರಪ್ಪನಹಳ್ಳಿಯಲ್ಲಿಯೇ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಸನ್ನದು ಲೆಕ್ಕಪರಿಶೋಧಕರ ವೃತ್ತಿಯ ಜೊತೆಗೆ ಜನಸಾಮಾನ್ಯರಿಗೆ ಸಹಾಯವಾಗುವಂತಹ ಕಾರ್ಯಕ್ಷೇತ್ರವನ್ನು ಅರಸುತ್ತಾ ಸಹಕಾರ ಕ್ಷೇತ್ರದ ಬಗ್ಗೆ ಅಭಿಮಾನ ಮೂಡಿ ಸಹಕಾರ ತತ್ವಗಳ ಮೂಲಕ ಈ ಕಾರ್ಯ ಸಾಧ್ಯ ಎಂದು ಮನಗಂಡು 1997ರಲ್ಲಿ ಹರಪನಹಳ್ಳಿಯಲ್ಲಿ ಆದರ್ಶ ಪಟ್ಟಣ ಸಹಕಾರ ಬ್ಯಾಂಕ್ ಸ್ಥಾಪಿಸಿ ಸಂಸ್ಥಾಪಕ ಅಧ್ಯಕ್ಷರಾದರು. ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದ ನಂತರ ಹೊಸ ಕಾಯ್ದೆಗೆ ಬ್ಯಾಂಕ್‌ನ್ನು ಪರಿವರ್ತನೆಗೊಳಿಸಿದೆ. ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಹಕಾರ ಕ್ಷೇತ್ರದ ಹಾಗೂ ಬೇರೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಯುತರು ಹರಪ್ಪನಹಳ್ಳಿ ರೋಟರಿ ಕ್ಲಬ್‌ನ ಅಧ್ಯಕ್ಷರಾಗಿ, ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾಗಿ, ದಾವಣಗೆರೆಯಲ್ಲಿ ಬಿಜೆಪಿ ಪಕ್ಷದ ಉಪಾಧ್ಯಕ್ಷರಾಗಿ, ರಾಜ್ಯ ಪರಿಷತ್ ಸದಸ್ಯರಾಗಿ ಹಾಗೂ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸದಸ್ಯರಾಗಿ ಮತ್ತು ಹರಪನಹಳ್ಳಿ ತಾಲ್ಲೂಕು ಬಿಜೆಪಿ ಅಧ್ಯಕ್ಷರಾಗಿ 3 ಅವಧಿಗೆ ಕಾರ್ಯ ನಿರ್ವಹಿಸಿದ್ದಾರೆ. ಸಹಕಾರ ಪ್ರಕೋಷ್ಠ ಜಿಲ್ಲಾ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಗೆ ಬೆಂಗಳೂರು ವಿಭಾಗದ ನಿರ್ದೇಶಕರಾಗಿ ಪುನರಾಯ್ಕೆಯಾಗಿರುತ್ತಾರೆ.

### ನ್ಯಾಯಾಲಯದಲ್ಲಿ ದಾವಾ ದಾಖಲಿಸಲು ದಾವೆಯ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರದ ಚೆಕ್ ಲಿಸ್ಟ್

- ಸದಸ್ಯತ್ವದ ಅರ್ಜಿ
- ಶೇರ್ ಲೆಡ್ಜರ್, ಎಕ್ಸ್‌ಟ್ರ್ಯಾಟ್ (ಶೇರುದಾರರೆಂದು ಸಮರ್ಥಿಸಲು)
- ಸಾಲದ ಅರ್ಜಿ
- ಸಾಲ ಮಂಜೂರಾದ ಉಪ ಸಮಿತಿ/ ಆಡಳಿತ ಮಂಡಲಿ ಠರಾವು
- **ಸಾಲ ತಾರಹೇ :**

– ಜಾಮೀನು ಆಧಾರದ ಸಾಲವಾಗಿದ್ದರೆ ಜಾಮೀನುದಾರರ ಮಾಹಿತಿ
– ವಾಹನ ಸಾಲವಾಗಿದ್ದರೆ (ವಾಹನ ಹೈಪಾಥೀಕೇಶನ್ ವಿವರಗಳು)
– ಆಭರಣ ಸಾಲವಾಗಿದ್ದರೆ (ಆಭರಣ ಸಾಲದ ವಿವರ)
– ಸ್ಥಿರಾಸ್ತಿ ಆಧಾರದ ಸಾಲವಾಗಿದ್ದರೆ (ಸ್ಥಿರಾಸ್ತಿ ಅಡಮಾನ ಮಾಡಿರುವ ದಾಖಲೆ, ಮಾರ್ಟಗೇಜ್ ಡೀಡ್, ಆಸ್ತಿಯ ವಿವರ ಹಾಗೂ ಇದಕ್ಕೆ ಸಂಬಂಧಿಸಿದ ಇತರೆ ದಾಖಲೆಗಳು, ಇ ಸಿ ಭೋಜಾ ದಾಖಲೆ, ಆರ್.ಟಿ.ಸಿ, ಸಾಲ ವಿತರಿಸುವ ಸಂಸ್ಥೆಯ ವಿವರ ಇರಬೇಕು)
– ಸಾಲದ ಮೊತ್ತ ಸಾಲಗಾರರಿಗೆ ಪಾವತಿಯಾಗಿರುವ ಬಗ್ಗೆ ದಾಖಲೆ (ಉಳಿತಾಯ ಖಾತೆಗೆ ಜಮೆ, ಉಳಿತಾಯ ಖಾತೆಯ ಉದ್ಧೃತ ಭಾಗ, ಚೆಕ್ ಅಥವಾ ಇನ್ನಾವುದೇ ತರಹ ಸಾಲ ವಿತರಿಸಿದ್ದರೆ ಅದರ ದಾಖಲೆ)
– ಪ್ರಾಮಿಸರಿ ನೋಟ್
– ಕರಾರು ಪತ್ರ
– ಸಾಲದ ಖಾತೆಯ ಉದ್ಧೃತ ಭಾಗ (Loan Ledger Extract)
– ಸಾಲಗಾರರಿಗೆ ನೀಡಿದ ಅಂತಿಮ ನೋಟೀಸ್ ಹಾಗೂ ನೋಟೀಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಗಳು
– ನ್ಯಾಯಾಲಯದ ವೆಚ್ಚ ಪಾವತಿಸಿರುವುದಕ್ಕೆ ವಿವರ

- ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಪ್ರತಿವಾದಿಗಳಿಗೆ ನೋಟೀಸ್‌ನೊಂದಿಗೆ ಜಾರಿಗೊಳಿಸಲು ಅಗತ್ಯವಿರುವಷ್ಟು ಪ್ರತಿಗಳನ್ನು ಸಲ್ಲಿಸಬೇಕು. (ಪ್ರತಿವಾದಿಗಳ ಸಂಖ್ಯೆ ಆಧರಿಸಿ)
- ಈ ಎಲ್ಲಾ ದಾಖಲೆಗಳನ್ನು ಮುಖ್ಯಕಾರ್ಯನಿರ್ವಾಹಕರ ಸಹಿಯೊಂದಿಗೆ ದೃಢೀಕರಿಸಿ ನೀಡತಕ್ಕದ್ದು.

# ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿಯ ಸ್ವಂತ ಕಟ್ಟಡದ ಉದ್ಘಾಟನೆ



**ಬೆಂಗಳೂರು :** ಶ್ರೀ ಕಾಳಿಕಾಂಬಾ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ ನೂತನ ಸ್ವಂತ ಕಟ್ಟಡದ ಉದ್ಘಾಟನಾ ಸಮಾರಂಭವು ದಿನಾಂಕ 24.09.2017ರಂದು ನೆರವೇರಿತು. ಈ ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಶ್ರೀ ಶ್ರೀ ಗುರು ಶಿವಸುಜ್ಞಾನ ತೀರ್ಥ ಮಹಾ ಸ್ವಾಮೀಜಿ, ಅರೆಮಾದನಹಳ್ಳಿ, ಹಾಸನ ಹಾಗೂ ಮಲ್ಲೇಶ್ವರ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಅಶ್ವಥ ನಾರಾಯಣ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ವೈ.ಕುಮಾರ್, ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ಎಸ್.ಎ.ಬಸವರಾಜಪ್ಪ ಹಾಗೂ ಶ್ರೀ ಆರ್.ಎಸ್.ಹುಚ್ಚಾಚಾರಿ, ಸಹಕಾರಿ ಸಂಘಗಳ ಹೆಚ್ಚುವರಿ ನಿಬಂಧಕರು (ನಿವೃತ್ತ) ಇವರು ಭಾಗವಹಿಸಿದ್ದರು.

# ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕಿನ ಶಾಖೆಗಳ ಉದ್ಘಾಟನೆ

**ಬೆಳಗಾವಿ :** ಬೆಲ್ಲದ-ಬಾಗೇವಾಡಿ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಬೆಲ್ಲದ-ಬಾಗೇವಾಡಿ ಬ್ಯಾಂಕಿನ ಕಣಗಲಾದಲ್ಲಿ 11ನೇ ಶಾಖೆ, ಸದಾಶಿವ ನಗರ, ಬೆಳಗಾವಿಯಲ್ಲಿ 12ನೇ ಶಾಖೆ ಹಾಗೂ ಶಿವಬಸವ ನಗರ, ಬೆಳಗಾವಿಯಲ್ಲಿ 13ನೇ ಶಾಖೆಯು ಉದ್ಘಾಟನೆಗೊಂಡಿತು.





# ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿಯ ಶಾಖೆಯ ಉದ್ಘಾಟನೆ

**ಬೆಂಗಳೂರು :** ಶ್ರೀ ಸೀತಾರಾಮ ಮಂದಿರಂ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 4ನೇ ಶಾಖೆಯನ್ನು ರಾಜಾಜಿನಗರದಲ್ಲಿ ದಿನಾಂಕ 21.09.2017ರಂದು ಪ್ರಖ್ಯಾತ ಚಲನಚಿತ್ರ ನಟರಾದ ಶ್ರೀ ಎಸ್.ಶಿವರಾಂರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ॥ ಯು. ಗಣೇಶ್, ಉಪಾಧ್ಯಕ್ಷರಾದ ಶ್ರೀ ಬಿ.ವಿ.ಚಂದ್ರಶೇಖರ್ ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

# ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಮೃತಹಳ್ಳಿ ಶಾಖೆಯ ಉದ್ಘಾಟನೆ

**ಬೆಂಗಳೂರು :** ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಮೃತಹಳ್ಳಿಯ ಶಾಖೆಯನ್ನು ಉದ್ಘಾಟಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಪುಟ್ಟಶಾಮಪ್ಪರವರು ಪ್ರಾಮಾಣಿಕ ಹಾಗೂ ನಂಬಿಕೆಯ ಸೇವೆಯೇ ನಮ್ಮ ಮುಖ್ಯ ಧ್ಯೇಯ. ಬಡ ಮಧ್ಯಮ ವರ್ಗದವರ ಸರ್ವತೋಮುಖ ಅಭಿವೃದ್ಧಿಗೆ ನಮ್ಮ ಸಹಕಾರಿಯು ಶ್ರಮಿಸುತ್ತಿದೆ. ಮಧ್ಯಮ ವರ್ಗದ ಮಹಿಳಾ ಉದ್ಯಮಿಗಳ ಅದರಲ್ಲೂ ಹಪ್ಪಳ, ಸಂಡಿಗೆ, ಸಾಂಬಾರು ದಿನಸುಗಳನ್ನು ತಯಾರಿಸುವ ಮಹಿಳಾ ಉದ್ಯಮಿಗಳಿಗೆ ಸುಲಭ ಬಡ್ಡಿದರದಲ್ಲಿ ಸಾಲ ಕೊಡುವ ಮೂಲಕ ಅವರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಕೊಡಲಾಗುವುದು ಎಂದರು. ಅಮೃತಹಳ್ಳಿ ಶಾಖೆಯಲ್ಲಿ ಇ-ಸ್ವ್ಯಾಪಿಂಗ್ ಸೌಲಭ್ಯ, ಈಜಿ ಮನಿ ಯೋಜನೆ ಮತ್ತು ಚಿನ್ನ ಹಾಗೂ ಒಡವೆಗಳ ಮೇಲೆ ಸಾಲ ಸೌಲಭ್ಯವನ್ನು ನೀಡಲಾಗುವುದು ಎಂದು ತಿಳಿಸಿದರು. ಶಾಖಾ ಪ್ರಾರಂಭೋತ್ಸವ ಸಮಾರಂಭದಲ್ಲಿ ಸಹಕಾರಿ ಉಪಾಧ್ಯಕ್ಷರಾದ ಶ್ರೀ ವೀರೇಶ್ ಹಾಗೂ ನಿರ್ದೇಶಕರುಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



## ಸಂವಾದ ಕಾರ್ಯಕ್ರಮ : ಬದಲಾವಣೆಗೆ ತಕ್ಕಂತೆ ಪರಿವರ್ತನೆ ಅನಿವಾರ್ಯ – ಶ್ರೀ ಬಿ.ವಿ. ರವೀಂದ್ರನಾಥ್

**ಶಿವಮೊಗ್ಗ :** ದಿನಾಂಕ : 08.10.2017ರಂದು ನಗರದ ನವ್ಯಶ್ರೀ ಸಭಾ ಭವನದಲ್ಲಿ ಆರ್ಥಿಕ ವ್ಯವಹಾರ ಹಿಂದೆ-ಇಂದು-ಮುಂದೆ ಎಂಬ ಸಂವಾದ ಕಾರ್ಯಕ್ರಮವನ್ನು ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಶಿವಮೊಗ್ಗ ಶಾಖೆಯ ವತಿಯಿಂದ ಜರುಗಿತು.

ಸಂವಾದ ಕಾರ್ಯಕ್ರಮದಲ್ಲಿ ಶ್ರೀ ಬಿ.ವಿ.ರವೀಂದ್ರನಾಥ್‌ರವರು ಮಾತನಾಡಿ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಶ್ಲೇಷಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ.,ನ ಅಧ್ಯಕ್ಷರಾದ ಶ್ರೀ ಎಂ.ಎಸ್. ವೆಂಕಟೇಶ್‌ರವರು ವಹಿಸಿದ್ದರು.

ಸಹಕಾರಿಯ ಸಾಧನೆಯ ಬಗ್ಗೆ ವಿವರಿಸುತ್ತಾ, ಕಳೆದ ವರ್ಷದಲ್ಲಿ ರೂ. 2.5 ಕೋಟಿ ಶೇರು ಬಂಡವಾಳ, ರೂ. 4.5 ಕೋಟಿ ಒಟ್ಟು ನಿಧಿಗಳೊಂದಿಗೆ, ರೂ. 84.00 ಲಕ್ಷ ನಿವ್ವಳ ಲಾಭ ಗಳಿಸಿ, ಶೇ. 11 ಡಿವಿಡೆಂಡ್ ನೀಡಲಾಗಿದೆ. ಸದಸ್ಯರ ವಿಶ್ವಾಸಾರ್ಹತೆಯಿಂದಾಗಿ ಹೆಚ್ಚಿನ ಸಾಧನೆಗಳಿಗೆ ಅವಕಾಶವಿದ್ದು, ಆರ್ಥಿಕದ



ಜೊತೆಗೆ ಸಾಮಾಜಿಕ ಕ್ಷೇತ್ರಗಳಲ್ಲೂ ಸಂಸ್ಥೆ ತೊಡಗಿಸಿಕೊಂಡಿದೆ ಎಂದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಹೆಚ್.ರಾಜೇಂದ್ರ ಪೈ, ಸಲಹಾ ಸಮಿತಿಯ ಸದಸ್ಯರಾದ ಶ್ರೀ ಆರ್.ಎಸ್.ಗೋಪಾಲಕೃಷ್ಣರಾವ್, ಶ್ರೀ ಎಂ.ಎನ್.ವೆಂಕಟೇಶ್ ಹಾಗೂ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಶ್ರೀನಿವಾಸ ಮೂರ್ತಿರವರು ಉಪಸ್ಥಿತರಿದ್ದರು.

## ನಿತ್ಯಶ್ರೀ ಸೌಹಾರ್ದ ಸಹಕಾರಿ ವತಿಯಿಂದ ಕನ್ನಡ ಕುವರ-ಕುವರಿ ಪ್ರಶಸ್ತಿ ಪ್ರಧಾನ

**ಹೂವಿನಹಡಗಲಿ :** ನಿತ್ಯಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಸಹಕಾರಿ ವತಿಯಿಂದ ದಿನಾಂಕ : 01.10.2017ರಂದು ತಾಲ್ಲೂಕಿನ ಪ್ರತಿಯೊಂದು ಪ್ರೌಢ ಶಾಲೆ ಮತ್ತು ಕಾಲೇಜು ವಿಭಾಗದಲ್ಲಿ ಕನ್ನಡದಲ್ಲಿ 95ಕ್ಕಿಂತ ಹೆಚ್ಚು ಅಂಕ ಪಡೆದ 68 ಮಕ್ಕಳಿಗೆ ಕನ್ನಡ ಕುವರ-ಕುವರಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ಹೆಚ್.ಎಂ. ಬೆಟ್ಟಯ್ಯರವರು ಸಸಿಗೆ ನೀರೆರೆಯುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ವಿದ್ಯಾರ್ಥಿಗಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂತೋಷ. ಕೆ.ರವರು ಪ್ರಶಸ್ತಿ ಪ್ರಧಾನ ಮಾಡಿದರು.



ಮುಖ್ಯ ಅತಿಥಿಗಳಾಗಿ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಹೆಚ್. ಕೆ.ಚಂದ್ರಪ್ಪ, ಶಿಕ್ಷಣ ಸಂಯೋಜಕರಾದ ಶ್ರೀ ನಿಂಗಪ್ಪರವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಜಿ.ಎಸ್.ಟಿ. ಕುರಿತು ಮಾಹಿತಿ ಕಾರ್ಯಾಗಾರ



**ಸುಳ್ಯ :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ದರ್ಬೆ, ಪುತ್ತೂರು ಇದರ ಸಹಸಂಸ್ಥೆಯಾಗಿರುವ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.)ನ ವತಿಯಿಂದ ಸಾಮಾಜಿಕ ಜಾಗೃತಿಯ ಅಡಿಯಲ್ಲಿ ಜಿ ಎಸ್ ಟಿ ಕುರಿತು ಮಾಹಿತಿ ಕಾರ್ಯಾಗಾರವು ದಿನಾಂಕ : 17.10.2017ರಂದು ಸುಳ್ಯದ ಸಿ.ಎ. ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು. ಕಾರ್ಯಾಗಾರವನ್ನು ಸುಳ್ಯ ಸಿ.ಎ. ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಸುಭೋದ ಶೆಟ್ಟಿ ಮೇನಾಲ ಇವರು ಉದ್ಘಾಟಿಸಿ ಶುಭಹಾರೈಸಿದರು. ಅಧ್ಯಕ್ಷತೆಯನ್ನು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ವಿನಯ್ ಕುಮಾರ್ ಕಂದಡ್ಕರವರು ವಹಿಸಿದ್ದರು. ಮುಖ್ಯ ಅಥಿತಿಗಳಾಗಿ ವಾಣಿಜ್ಯ ತೆರಿಗೆ ಇಲಾಖೆಯ ಸಹಾಯಕ ಆಯುಕ್ತರಾದ ಶ್ರೀ ಹಿರಿಯಪ್ಪಯವರು ಭಾಗವಹಿಸಿದ್ದರು. ಕಾರ್ಯಾಗಾರದಲ್ಲಿ ಜಿ ಎಸ್ ಟಿ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ನಂತರ ಸಂವಾದ ಕಾರ್ಯಕ್ರಮ ನಡೆಯಿತು.

**ಕಡಬ :** ಟ್ರಸ್ಟ್‌ನ ಅಡಿಯಲ್ಲಿ ಮಹಿಳಾ ಸಬಲೀಕರಣ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿಯಲ್ಲಿ ಕಡಬದಲ್ಲಿ ನಡೆದ 6 ತಿಂಗಳ 4ನೇ ಉಚಿತ ಹೊಲಿಗೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭವು ದಿನಾಂಕ 27.09.2017ರಂದು ಜರುಗಿತು.

### ಸನ್ಮಾನ



**ಕೊಡಗಾನೂರ :** ಗುರುಮಾತೇಯರ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ ವತಿಯಿಂದ ಕೊಡಗಾನೂರ ಗ್ರಾಮದಲ್ಲಿ ನಡೆದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಾ ಡಿ. ರಾಯ್ಕರ, ಹಿರಿಯ ನ್ಯಾಯಾಧೀಶರು & ಜೆ.ಎಂ.ಎಫ್.ಸಿ., ಬ.ಬಾಗೇವಾಡಿ ಇವರನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಚ. ಹಿರೇಮಠರವರು ಸನ್ಮಾನಿಸಿದರು.

## ಭೇಟಿ



ಜೀವನಸ್ಫೂರ್ತಿ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಯರಾಮ ಆರ್. ಮಾಳಾಪೂರ ಇವರು ಶ್ರೀ ಶಕ್ತಿನಿಕೇತನ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹಣ್ಣು-ಹಂಪಲು ಉಪಹಾರ ನೀಡಿ, ವೃದ್ಧರೊಂದಿಗೆ ಸಿಹಿ ಹಂಚುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಅರಿಹಂತ ಅರ್ಬನ್ ಸೌಹಾರ್ದ ಸಹಕಾರಿಯ 6ನೇ ಶಾಖೆಯ ಉದ್ಘಾಟನೆ



**ಚಿಕ್ಕೋಡಿ** : ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಹುಲ್ಲೋಳಿ ಇದರ 6ನೇ ಶಾಖೆಯು ಚಿಕ್ಕೋಡಿಯಲ್ಲಿ ದಿನಾಂಕ : 06.10.2017ರಂದು ಶ್ರೀ ಮ.ನಿ.ಪ್ರ.ಸಂಪಾದನ ಮಹಾಸ್ವಾಮಿಗಳು, ಸಂಪಾದನ ಚರಮೂರ್ತಿಮಠ ಚಿಕ್ಕೋಡಿ ಇವರ ಅಮೃತ ಹಸ್ತದಿಂದ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕರು, ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಜರುಗಿರುವ ವಾರ್ಷಿಕ ಸಾಮಾನ್ಯ ಸಭೆಯ ವರದಿಗಳು

## ಉದಯ ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

### ಸಹಕಾರಿಯ ಸಾಮಾಜಿಕ ಕಳಕಳಿಯ ಬಗ್ಗೆ ಮೆಚ್ಚುಗೆ ಹಾಗೂ ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣಕ್ಕೆ ಕರೆ - ಎನ್. ಸಂತೋಷ್ ಹೆಗಡೆ

**ಬೆಂಗಳೂರು** : ಉದಯ ಸೌಹಾರ್ದ ಪತ್ತಿನ ಸಹಕಾರಿ ನಿ., ಬೆಂಗಳೂರು ಸಹಕಾರಿಯ 2016-17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24.09.2017ರಂದು ಸಹಕಾರ ಸಮುದಾಯ ಭವನ, ಪ್ರಾದೇಶಿಕ ಸಹಕಾರ ನಿರ್ವಹಣಾ ತರಬೇತಿ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ನಡೆಯಿತು. ಸಹಕಾರಿಯು ಪ್ರಸಕ್ತ ಸಾಲಿನಲ್ಲಿ ರೂ.1,86,08,249/-ಗಳ ನಿವ್ವಳ ಲಾಭ ಗಳಿಸಿದೆ. ಸದಸ್ಯರುಗಳಿಗೆ ಶೇ.17ರಷ್ಟು ಡಿವಿಡೆಂಡ್ ಘೋಷಿಸಲಾಯಿತು.

ಬೆಂಗಳೂರಿನ ರಾಮಮೂರ್ತಿನಗರದಲ್ಲಿ ಶಾಖೆಯನ್ನು ಪ್ರಾರಂಭಿಸಲಾಗಿದೆ. ದಿನಾಂಕ : 31-03-2017ರಲ್ಲಿದ್ದಂತೆ ಸಹಕಾರಿಯ ಒಟ್ಟು ಸದಸ್ಯರು 3941, ಶೇರು ಬಂಡವಾಳ ರೂ. 3 ಕೋಟಿ 01 ಲಕ್ಷ, ಒಟ್ಟು ಠೇವಣಿಗಳು ರೂ. 68 ಕೋಟಿ 44 ಲಕ್ಷ, ಸದಸ್ಯರಿಂದ ಬರಬೇಕಾದ ಸಾಲ ಮತ್ತು ಮುಂಗಡಗಳು ರೂ. 69 ಕೋಟಿ 68 ಲಕ್ಷ, ವಿವಿಧ ಬ್ಯಾಂಕುಗಳಲ್ಲಿರುವ ಠೇವಣಿಗಳು ರೂ. 10 ಕೋಟಿ 05 ಲಕ್ಷ, ಸಹಕಾರಿಯ ದುಡಿಯುವ ಬಂಡವಾಳ ರೂ. 84.03 ಕೋಟಿಗಳನ್ನು ಹೊಂದಿದೆ.

ಈ ಸಂದರ್ಭದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಚಲನಚಿತ್ರ ನಟಿ ಶ್ರೀಮತಿ ಆರ್.ಟಿ.ರಮಾ, ಅಂತರರಾಷ್ಟ್ರೀಯ ಪ್ಯಾರಾ ಈಜುಗಾರರಾದ ಶ್ರೀ ವಿಶ್ವಾಸ್ ಕೆ.ಎಸ್. ಮತ್ತು ಶಾರದಾ ಪ್ರಶಸ್ತಿ ಪುರಸ್ಕೃತರಾದ ಶ್ರೀ ಶ್ರೀನಿವಾಸಮೂರ್ತಿ ಎ. ಹಾಗೂ ಸಹಕಾರಿಯ ಒಂಬತ್ತು ಹಿರಿಯ ಸದಸ್ಯರುಗಳನ್ನು ಮತ್ತು ಸೇವಾ ಹಿರಿತನದ ಮೇಲೆ ಸಹಕಾರಿಯ ಸಿಬ್ಬಂದಿ



ವರ್ಗದವರನ್ನು ಸನ್ಮಾನಿಸಲಾಯಿತು.

ಇದೇ ದಿನ ಸಂಜೆ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹಾಗೂ ವಿಶೇಷ ಮಕ್ಕಳ ಪೋಷಣಾ ಸಂಸ್ಥೆಗೆ ನಗದು ಪ್ರೋತ್ಸಾಹಧನ ವಿತರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಭಾರತದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯದ ಮಾಜಿ ಲೋಕಾಯುಕ್ತರಾದ ಶ್ರೀ ಎನ್.ಸಂತೋಷ್ ಹೆಗಡೆರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಸಹಕಾರಿಯ ಸಾಮಾಜಿಕ ಕಳಕಳಿಯ ಬಗ್ಗೆ ಮೆಚ್ಚುಗೆ ಹಾಗೂ ಭ್ರಷ್ಟಾಚಾರ ರಹಿತ ಸಮಾಜ ನಿರ್ಮಾಣಕ್ಕೆ ಕರೆ ನೀಡಿದರು.

## ಶ್ರೀ ಲಕ್ಷ್ಮೀ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆ

**ರಾಯಚೂರು** : ಶ್ರೀ ಲಕ್ಷ್ಮೀ ಪ್ರಗತಿ ಪತ್ತಿನ ಸೌಹಾರ್ದ ಸಹಕಾರಿ ನಿ., ರಾಯಚೂರು ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.08.2017ರಂದು ಶ್ರೀಮತಿ ವೀರ ಲಕ್ಷ್ಮಿ ಆದಿಮನಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ರಾಯಚೂರು ಇವರಿಂದ ಜ್ಯೋತಿ ಬೆಳಗಿಸುವುದರೊಂದಿಗೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶರಣಪ್ಪ ನೆಲಹಾಲ, ಶ್ರೀ ಬಿ. ಹಣಮಂತಪ್ಪ, ಬಿಇಓ, ಅಕ್ಷರ ದಾಸೋಹ, ಜಿಲ್ಲಾ




ಪಂಚಾಯತ್, ರಾಯಚೂರು ಹಾಗೂ ಶ್ರೀ ಕೆ.ಶಾಂತಪ್ಪ, ಅಧ್ಯಕ್ಷರು, ಜಿಲ್ಲಾ ಗಂಗಾಮತ, ರಾಯಚೂರು ಇವರು ಉಪಸ್ಥಿತರಿದ್ದರು.

## ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ

**ಧಾರವಾಡ :** ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ವೆಂಕಟೇಶ ದೇಸಾಯಿರವರು ಸಹಕಾರಿಯು 2016–17ನೇ ಸಾಲಿನಲ್ಲಿ ಅತ್ಯುತ್ತಮ ಪ್ರಗತಿ ಹೊಂದಿ, ರೂ.4 ಕೋಟಿಗಿಂತಲೂ ಅಧಿಕ ವ್ಯವಹಾರ ನಡೆಸಿ, ಅಭಿವೃದ್ಧಿ ಪಥದತ್ತ ನಡೆಯುತ್ತಿದ್ದು, ಶೇರುದಾರರಿಗೆ ಶೇ.9 ಲಾಭಾಂಶವನ್ನು ವಿತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು. ಸಹಕಾರಿಯ ಪ್ರಗತಿಯ ಬಗ್ಗೆ ವಿವರಿಸಿದ ಅವರು 25 ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ಸುಮಾರು ರೂ. 25 ಲಕ್ಷ ವಿತರಿಸಿದ್ದು, ಅವರು ವ್ಯವಸ್ಥಿತವಾಗಿ ಅಭಿವೃದ್ಧಿ ಹೊಂದುತ್ತಾ ಸಾಲವನ್ನು



ಮರುಪಾವತಿಸುತ್ತಿರುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ರೋಹಿಣಿ ಇಮಾರತಿ ಅವರನ್ನು ಹೃತ್ಪೂರ್ವಕವಾಗಿ ಸನ್ಮಾನಿಸಲಾಯಿತು.



## ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ–ಆಪರೇಟಿವ್‌ನ ಪ್ರಥಮ ವಾರ್ಷಿಕ ಸಾಮಾನ್ಯ ಸಭೆ

**ದಾವಣಗೆರೆ :** ದಿ ವೆಜಿಟಬಲ್ ಪ್ಲಾಂಟ್ ಸೌಹಾರ್ದ ಕೋ–ಆಪರೇಟಿವ್ ಲಿ., ದಾವಣಗೆರೆ ಸಹಕಾರಿಯ ಪ್ರಥಮ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 12.08.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಹೆಚ್.ಶಿವಯೋಗಪ್ಪರವರ ಅಧ್ಯಕ್ಷತೆಯಲ್ಲಿ ಜರುಗಿತು. ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೀರಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸಹಕಾರಿಯು ಕೇವಲ 7 ತಿಂಗಳ ಅವಧಿಗೆ ರೂ.3,17,122/–ಗಳ ಲಾಭ ಗಳಿಸಿರುತ್ತದೆ.

## ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ



**ಉಡುಪಿ :** ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಬೇಬಿ ಎಚ್. ಸಾಲ್ಯಾನ್‌ರವರ ಅಧ್ಯಕ್ಷತೆಯಲ್ಲಿ ದಿನಾಂಕ : 01.09.2017ರಂದು ಜರುಗಿತು. ಸಹಕಾರಿಯ ಲಾಭದಲ್ಲಿ ಮಹಿಳೆಯರಿಗೆ ಶೇ.13ರಷ್ಟು ಡಿವಿಡೆಂಡ್‌ನ್ನು ಘೋಷಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾಗಿರುವ ಹಾಗೂ ಸಹಕಾರಿಯ ಕಾನೂನು ಸಲಹೆಗಾರರಾದ ಶ್ರೀ ಮಂಜುನಾಥ ಎಸ್.ಕೆ. ಹಾಗೂ ಅಂತರರಾಷ್ಟ್ರೀಯ ಮಟ್ಟದ ಇಂಡೋ ಶ್ರೀಲಂಕಾ ಮುಕ್ತ ಕರಾಟೆ ಛಾಂಪಿಯನ್‌ಶಿಪ್ ಪ್ರಥಮ ಪ್ರಶಸ್ತಿಯನ್ನು ಪಡೆದ ಸಹಕಾರಿಯ ಸದಸ್ಯರ ಮಕ್ಕಳಾದ ರಿಷಬ್ ಆರ್. ಕೋಟ್ಯಾನ್ ಕೋಟೆ ಮತ್ತು ಶ್ರವಣ್ ಕೋಟ್ಯಾನ್ ಕೋಟೆ ಇವರನ್ನು ಸನ್ಮಾನಿಸಲಾಯಿತು.

ಹೃದಯರೋಗದಿಂದ ಬಳಲುತ್ತಿರುವ ಬ್ರಹ್ಮಾವರ ಮೀನು ಮಾರುಕಟ್ಟೆಯ ಮೀನುಗಾರ ಮಹಿಳೆ ಗೋಧು ಕುಂದರ್ ಅವರಿಗೆ ಸಂಘದ ವತಿಯಿಂದ ರೂ.10000/– ಆರ್ಥಿಕ ನೆರವು ವಿತರಣೆ ಮಾಡಲಾಯಿತು.

ಸಹಕಾರಿಯ ಸದಸ್ಯರ 68 ಮಂದಿ ಮಕ್ಕಳಿಗೆ ರೂ.1 ಲಕ್ಷಗಳ ಸ್ಕಾಲರ್‌ಶಿಪ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಜಯಂತಿ ಗುರುದಾಸ್ ಬಂಗೇರ ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ದಿ ಗ್ಲೋಬಲ್ ಸೌಹಾರ್ದ ಕೋ–ಆಪರೇಟಿವ್‌ನ 2ನೇ ವಾರ್ಷಿಕ ಸಾಮಾನ್ಯ ಸಭೆ

**ಜಮಖಂಡಿ :** ದಿ ಗ್ಲೋಬಲ್ ಸೌಹಾರ್ದ ಕೋ–ಆಪರೇಟಿವ್ ಲಿ., ಜಮಖಂಡಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 09.09.2017ರಂದು ಶ್ರೀ ಜಿನಗೊಂಡ ಎಸ್ ಸಿದ್ದೋಜಿಯವರ ಅಧ್ಯಕ್ಷತೆಯಲ್ಲಿ ಹಾಗೂ ಉಪಾಧ್ಯಕ್ಷರಾದ ಶ್ರೀ ನಂದೆಪ್ಪಾ ಎಸ್. ಕಾರಜೋಳರವರು ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿದರು.



## ಶ್ರೀ ಪುಟ್ಟರಾಜ ಗವಾಯಿ-ಸಚೇತನ ವಿವಿಧೋದ್ಧೇಶಗಳ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ



**ಬಂಕಾಪೂರ :** ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿಧೋದ್ಧೇಶಗಳ ಸೌಹಾರ್ದ ಸಹಕಾರಿ ನಿ., ಬಂಕಾಪೂರ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಹನುಮಂತಪ್ಪ.ಯು.ವಿ.ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಯ ಉದ್ಘಾಟನೆಯನ್ನು ಶ್ರೀ ಎಸ್.ಎಮ್.ಕಮ್ಮಾರ, ಹಿರಿಯ ವಕೀಲರು ನೆರವೇರಿಸಿದರು. ಈ ಸಂದರ್ಭದಲ್ಲಿ ಹುಟ್ಟು ಅಂಗವಿಕಲ 18 ವರ್ಷದ ಮಗಳಿಗೆ ಗೌರವಧನ ನೀಡಲಾಯಿತು ಮತ್ತು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮಕ್ಕಳಿಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಲಾಯಿತು. ಸಹಕಾರಿಯ ಸದಸ್ಯರು ಮತ್ತು ಸಹಸದಸ್ಯರಿಗೆ ಶೇ.10 ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.

## ಮುನವಳ್ಳಿ ಲಿಬರಲ್ ಸೌಹಾರ್ದ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ

**ಮುನವಳ್ಳಿ :** ಮುನವಳ್ಳಿ ಲಿಬರಲ್ ಸೌಹಾರ್ದ ಸಹಕಾರಿ ಲಿ., ಮುನವಳ್ಳಿ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 15.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಉಮೇಶ ಶಿ. ಬಾಳಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು.





## ಕೆಂಗಲ್ ಸೌಹಾರ್ದ ಕೋ-ಆಪರೇಟಿವ್‌ನ 2ನೇ ವಾರ್ಷಿಕ ಸಾಮಾನ್ಯ ಸಭೆ

**ತುಮಕೂರು :** ಕೆಂಗಲ್ ಸೌಹಾರ್ದ ಕೋ–ಆಪರೇಟಿವ್ ಲಿ., ತುಮಕೂರು ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 16.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಸಿ.ರಾಮಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಕೆ. ಶಿವಸ್ವಾಮಿ ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಶ್ರೀ ಬಸವೇಶ್ವರ ವಿವಿಧೋದ್ಧೇಶ ಸೌಹಾರ್ದ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆ

**ಕೊಪ್ಪಳ :** ಶ್ರೀ ಬಸವೇಶ್ವರ ವಿವಿಧೋದ್ಧೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ 9ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ನಿಜಗುಣೆಪ್ಪ ಶೆಟ್ಟರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ವರ್ಷಾಂತ್ಯಕ್ಕೆ ಒಟ್ಟು ರೂ.57.03 ಲಕ್ಷ ಶೇರು ಬಂಡವಾಳವನ್ನು ಹೊಂದಿದ್ದು, ರೂ.512.62 ಲಕ್ಷದಷ್ಟು ಠೇವಣಿ ಸಂಗ್ರಹಿಸಿದ್ದು, ರೂ.596.12 ಲಕ್ಷದಷ್ಟು ಸಾಲ ವಿತರಿಸಿದೆ. ರೂ.34.21 ಲಕ್ಷದಷ್ಟು ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.20ರಷ್ಟು ಡಿವಿಡೆಂಡ್ ನೀಡಲು ಸಭೆಯು ನಿರ್ಧರಿಸಿತು.






## ಶ್ರೀ ಪತಂಜಲಿ ಸೌಹಾರ್ದ ಪತ್ತಿನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಪಾವಗಡ :** ದಿನಾಂಕ : 17.09.2017ರಂದು ನಡೆದ ಶ್ರೀ ಪತಂಜಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಪಾವಗಡ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಸುದರ್ಶನ್ ರಾವ್‌ರವರು 2016–17ನೇ ಸಾಲಿಗೆ ಸಹಕಾರಿಯು ರೂ.23.09 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.18ರಷ್ಟು ಡಿವಿಡೆಂಡ್ ಘೋಷಿಸಿದರು. ಈ ಸಂದರ್ಭದಲ್ಲಿ ವಿದ್ಯಾವಂತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಹಾಗೂ ಮುಂದಿನ ವಿದ್ಯಾಭ್ಯಾಸಕ್ಕಾಗಿ ಡೊನೇಷನ್ ನೀಡಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಿ.ಎ.ಬಾಲಾಜಿ ಹಾಗೂ ನಿರ್ದೇಶಕರುಗಳು ಮತ್ತು ಸದಸ್ಯರು, ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆ



**ಮುಧೋಳ :** ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಮುಧೋಳ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿರವರ ಅಧ್ಯಕ್ಷತೆಯಲ್ಲಿ ಮುಧೋಳದಲ್ಲಿ ದಿನಾಂಕ 23.09.2017ರಂದು ಜರುಗಿತು. ಸಹಕಾರಿಯು ರೂ.2.90 ಕೋಟಿ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.25ರಷ್ಟು ಲಾಭಾಂಶವನ್ನು ವಿತರಿಸಲು ತೀರ್ಮಾನಿಸಲಾಯಿತು. 2016–17ರ ಕೊನೆಗೆ ಸಹಕಾರಿಯು 26386 ಸದಸ್ಯರನ್ನು ಹೊಂದಿದ್ದು, ರೂ.11.08 ಕೋಟಿ ಶೇರು ಬಂಡವಾಳ ಮತ್ತು ನಿಧಿಗಳನ್ನು ಹೊಂದಿದೆ. ರೂ.6297 ಕೋಟಿ ವಹಿವಾಟು ನಡೆಸಿದ ಸಹಕಾರಿಯು ಸದಸ್ಯರಿಂದ ರೂ.350 ಕೋಟಿ ಠೇವಣಿಗಳನ್ನು ಸಂಗ್ರಹಿಸಿದೆ. ಸಭೆಯಲ್ಲಿ ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಮುರುಗೇಶ ನಿರಾಣಿಯವರು ಉಪಸ್ಥಿತರಿದ್ದರು.

## ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆ

**ಚಿತ್ರದುರ್ಗ :** ಶ್ರೀ ಕನ್ಯಕಾಪರಮೇಶ್ವರಿ ಸೌಹಾರ್ದ ಸಹಕಾರಿ ನಿ., ಚಿತ್ರದುರ್ಗ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 17.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಪಿ.ಎಸ್.ನಾಗರಾಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು.






## ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಕೋಣಂದೂರು :** ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋಣಂದೂರು ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 23.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಕೆ.ಆರ್.ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಸದಸ್ಯರ ಮಕ್ಕಳಿಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ 10 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ಸಹಕಾರಿಯು ರೂ.20,69,393/–ಗಳ ಲಾಭ ಗಳಿಸಿದ್ದು, ಶೇ.12ರಷ್ಟು ಡಿವಿಡೆಂಡ್‌ನ್ನು ಸದಸ್ಯರಿಗೆ ನೀಡಲು ತೀರ್ಮಾನಿಸಲಾಯಿತು.




## ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ

**ಮೂಡುಬಿದಿರೆ :** ಶ್ರೀ ಪಂಚಶಕ್ತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮೂಡುಬಿದಿರೆ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 17.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ಪೂಜಾರಿ ಎಂ. ಇವರ ಅಧ್ಯಕ್ಷತೆಯಲ್ಲಿ ಜರುಗಿತು. 2016–17ನೇ ಸಾಲಿನಲ್ಲಿ ರೂ.10,63,839/–ರಷ್ಟು ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ನೀಡಲು ಘೋಷಿಸಲಾಯಿತು.

## ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ


**ತುಮಕೂರು :** ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಲ್.ಸುರೇಶ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.74.77 ಲಕ್ಷ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.15ರಷ್ಟು ಡಿವಿಡೆಂಡ್ ಘೋಷಿಸಲಾಯಿತು. ಶೇ.75ಕ್ಕಿಂತ ಹೆಚ್ಚಿನ ಅಂಕ ಗಳಿಸಿರುವ ಮಕ್ಕಳನ್ನು ಪುರಸ್ಕರಿಸಿ ಸನ್ಮಾನಿಸಲಾಯಿತು. ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಮದನ ಮೋಹನ ರಾವ್ ಟಿ.ಆರ್. ಹಾಗೂ ನಿರ್ದೇಶಕರುಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಹಾಸನ :** ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾಸನ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 24.09.2017 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಚಾಮರಾಜೇಗೌಡರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.8,72,591/-ಗಳ ನಿವ್ವಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.25ರಷ್ಟು ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು.





## ಶ್ರೀಮಾತಾ ವೈಭವ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆ

**ಕುಮಟಾ :** ಶ್ರೀಮಾತಾ ವೈಭವ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ ಸಹಕಾರಿಯ 13ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎನ್.ನಾಯ್ಕರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ದಿನಾಂಕ : 31.03.2017ರಂದು ಶೇರು ಬಂಡವಾಳ ರೂ.12.79 ಲಕ್ಷಗಳು, ಠೇವಣಿಗಳು ರೂ.1.19 ಕೋಟಿಗಳು, ಸಾಲಗಳು ರೂ.1.14 ಕೋಟಿ, ಹೂಡಿಕೆಗಳು ರೂ.24.80 ಲಕ್ಷಗಳು, ಲಾಭ ರೂ.21.89 ಲಕ್ಷಗಳನ್ನು ಹೊಂದಿದ್ದು, ಸಾಲ ವಸೂಲಾತಿ ಶೇ.95ರಷ್ಟಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪತ್ರಿಕೋದ್ಯಮದಲ್ಲಿ ಶತಮಾನೋತ್ಸವವನ್ನು ಆಚರಿಸಿದ ನಮ್ಮ ರಾಜ್ಯದ ಅತ್ಯಂತ ಹಿರಿಯ ಪತ್ರಿಕೆ "ಕಾನಡಾವೃತ"ದ ಸಂಪಾದಕರಾದ ಶ್ರೀ ಶ್ರೀಕಾಂತ ಶ್ಯಾನಭಾಗರು ಇವರನ್ನು ಸನ್ಮಾನಿಸಲಾಯಿತು.

## ಶ್ರೀ ಭಾರ್ಗವ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ

**ಕಾರ್ಕಳ :** ಶ್ರೀ ಭಾರ್ಗವ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 25.09.2017ರಂದು ದುರ್ಗ ಶ್ರೀ ಹರಿಹರ ಸಭಾಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಹರಿಹರ ಫಾಟಕ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯು ರೂ.3,83,078/-ಗಳ ಲಾಭ ಗಳಿಸಿದ್ದು, ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಡ್ ನೀಡಲು ಘೋಷಿಸಲಾಯಿತು. ಈ ಸಂದರ್ಭದಲ್ಲಿ ಸಾಮಾನ್ಯ ಕ್ಷೇಮನಿಧಿಯಿಂದ ಆರೋಗ್ಯದಲ್ಲಿ ಬಳಲಿದ ಆರು



ಸದಸ್ಯರಿಗೆ ಸಹಾಯಧನ ನೀಡಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು ಉಪಸ್ಥಿತರಿದ್ದರು.



## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ

**ಕಲ್ಲೋಳಿ :** ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿ ನಿ., ಕಲ್ಲೋಳಿ ಸಹಕಾರಿಯ 2016-17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಎಲ್ಲಾ ಸದಸ್ಯರಿಗೆ ಶೇ.18ರಷ್ಟು ಲಾಭಾಂಶ ನೀಡಲು ಘೋಷಿಸಿದ ಅವರು ಸಹಕಾರಿಯು ಸ್ವಂತ ಕಟ್ಟಡ ಹೊಂದಿ, 1574 ಸದಸ್ಯರು, ರೂ.9.98 ಲಕ್ಷ ಶೇರು ಬಂಡವಾಳ, ರೂ.6.14 ಕೋಟಿ ಠೇವಣಿ, ರೂ.1.10 ಕೋಟಿ ವಿವಿಧ ನಿಧಿಗಳನ್ನು ಹೊಂದಿದ್ದು, ರೂ.6.70 ಕೋಟಿ ವಿವಿಧ ಸಾಲಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

## ಸಿದ್ಧಸಿರಿ ಪತ್ತಿನ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ 11ನೇ ವಾರ್ಷಿಕ ಸಾಮಾನ್ಯ ಸಭೆ.







ಶ್ರೀ ಗುರುಬಸವ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ವಿಜಯಪುರ ಸಹಕಾರಿಯ 10ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 10.09.2017ರಂದು ಶ್ರೀ ಅರುಣ ಆರ್. ವಾರದ ಇವರ ಅಧ್ಯಕ್ಷತೆಯಲ್ಲಿ ಜರುಗಿತು.



ಶ್ರೀ ವೀರಭದ್ರೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸವದತ್ತಿ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 16.09.2017ರಂದು ಜರುಗಿತು.




ಜನಶ್ರೀ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 16.09.2017ರಂದು ಜರುಗಿತು.



ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಡಿಕೇರಿ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 17.09.2017ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜುನಾಥ ಕುಮಾರ್.ಕೆ.ಕೆ.ರವರು ಉದ್ಘಾಟಿಸಿದರು.



ಐಸಿರಿ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಮೊದಲನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 17.09.2017ರಂದು ಜರುಗಿತು.



ಯು.ಕೆ. ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಯಲ್ಲಾಪುರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 22.09.2017ರಂದು ಜರುಗಿತು.




ಶ್ರೀ ಕಾಮಧೇನು ಮಹಿಳಾ ವಿವಿಧೋದ್ದೇಶಗಳ ಸೌಹಾರ್ದ ನಿ., ಮುನವಳ್ಳಿ ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನೇತ್ರಾವತಿ ಸುರೇಶ ಬಾರಕೇರ ಇವರ ಅಧ್ಯಕ್ಷತೆಯಲ್ಲಿ ಜರುಗಿತು.



ತುಮಕೂರು ಜಿಲ್ಲಾ ಬಂಜಾರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ 8ನೇ ವಾರ್ಷಿಕ ಸಾಮಾನ್ಯ ಸಭೆ.



ನವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಂದಾಪೂರ ಸಹಕಾರಿಯ 2016–17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 25.09.2017ರಂದು ಜರುಗಿತು.




ಬಾಗಲವಾಡ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲವಾಡ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೇಖಾ ಚಂದ್ರಾಮಪ್ಪರವರ ಅಧ್ಯಕ್ಷತೆಯಲ್ಲಿ ಜರುಗಿತು.



ಶ್ರೀ ಕರಿಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಹರಸೂರ ಸಹಕಾರಿಯ 2016–17ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆ.



ಗಿರಿ ಮಲ್ಲಿಗೆ ಮಹಿಳಾ ಸೌಹಾರ್ದ ಸಹಕಾರಿ ನಿ., ಹೂವಿನಹಡಗಲಿ ಸಹಕಾರಿಯ 2ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಪ್ರಭಾರಿ ಅಧ್ಯಕ್ಷರಾದ ನರ್ಮದಾ ಯಲಗಚ್ಚಿನರವರ ಅಧ್ಯಕ್ಷತೆಯಲ್ಲಿ ಜರುಗಿತು.




ಶ್ರೀ ಮಾತಾಜಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ.




ಶ್ರೀ ನೀಲಗಿರೀಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಬಾಗಲಕೋಟ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ



ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ನಿ., ತಿಪಟೂರು ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಹಿರಿಯ ಸದಸ್ಯರುಗಳಿಗೆ ಸನ್ಮಾನ ಸಮಾರಂಭ.

## ಭದ್ರಾ ವೀರಶೈವ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆ



**ಭದ್ರಾವತಿ :** ಭದ್ರಾ ವೀರಶೈವ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಭದ್ರಾವತಿ ಸಹಕಾರಿಯ 7ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ : 05.09.2017ರಂದು ವೀರಶೈವ ಸಭಾಭವನ, ಭದ್ರಾವತಿ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಯೋಗಿ ಮಠದ್ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಹಕಾರಿಯ ಪ್ರಸಕ್ತ ಆರ್ಥಿಕ ವರ್ಷದಲ್ಲಿ ರೂ.3.15 ಲಕ್ಷಗಳ ನಿವ್ವಳ ಲಾಭವನ್ನು ಗಳಿಸಿದ್ದು, ಸದಸ್ಯರಿಗೆ ಶೇ.5ರಷ್ಟು ಡಿವಿಡೆಂಡ್ ಘೋಷಣೆ ಮಾಡಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾಗಿ ಆಯ್ಕೆಯಾದ ಶ್ರೀ ಎ.ಆರ್.ಪ್ರಸನ್ನಕುಮಾರ್‌ರವರಿಗೆ ಅಭಿನಂದಿಸಲಾಯಿತು.




ಶ್ರೀ ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.09.2017ರಂದು ಜರುಗಿತು.




ಶ್ರೀ ಗುರು ರಾಘವೇಂದ್ರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಳ್ಳಾರಿ ಸಹಕಾರಿಯ ದ್ವಿತೀಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.09.2017 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಲ್.ಕ್ರಿಷ್ಣ ರೆಡ್ಡಿರವರ ಅಧ್ಯಕ್ಷತೆಯಲ್ಲಿ ಜರುಗಿತು.

### ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಶ್ರೀ ವೀರರುದ್ರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಸಸಾಲಟ್ಟಿ



ಶ್ರೀ ಪರಪ್ಪ ಚ. ಮದನಮಟ್ಟಿ
ಅಧ್ಯಕ್ಷರು



ಶ್ರೀ ಪ್ರಕಾಶ ಚ. ಮರಡಿ
ಉಪಾಧ್ಯಕ್ಷರು

### ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಗೋಕುಲ ಪತ್ತಿನ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ



ಡಾ|| ಸಿ.ಸಿರಿಯಣ್ಣ
ಅಧ್ಯಕ್ಷರು



ಶ್ರೀ ಜಿ.ವಿ.ಜಯಣ್ಣ
ಉಪಾಧ್ಯಕ್ಷರು

### ಮುಂಬರುವ ತರಬೇತಿ ಕಾರ್ಯಕ್ರಮಗಳು

- **ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ :** ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗಾಗಿ "ಕಾರ್ಯಕ್ಷಮತೆ ಅಭಿವೃದ್ಧಿ ತರಬೇತಿ"ಯನ್ನು ದಿನಾಂಕ 04, 05 ಮತ್ತು 06 ನವೆಂಬರ್ 2017ರಂದು ಪ್ರಾದೇಶಿಕ ಆಡಳಿತ ಸಹಕಾರ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು ಇಲ್ಲಿ ಆಯೋಜಿಸಲಾಗಿದೆ.
- **ಆಡಳಿತ ಪರಿಣಿತಿ ತರಬೇತಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯ ನಿರ್ದೇಶಕರುಗಳಿಗಾಗಿ ಮೂರು ದಿನಗಳ "ಆಡಳಿತ ಪರಿಣಿತಿ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 8, 9 ಮತ್ತು 10 ನವೆಂಬರ್ 2017ರಂದು ಆಯೋಜಿಸಲಾಗಿದೆ.
- **ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 18ನೇ ತಂಡದ ತರಬೇತಿ ಕಾರ್ಯಕ್ರಮ :** ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 18ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮವನ್ನು ದಿನಾಂಕ 07 ಡಿಸೆಂಬರ್ 2017 ರಿಂದ 16 ಡಿಸೆಂಬರ್ 2017ರವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ. ನೋಂದಣಿಗೆ ಕೊನೆಯ ದಿನಾಂಕ : 30.11.2017. ಈ ತರಬೇತಿ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಯ ಸಿಬ್ಬಂದಿಯವರನ್ನು ಕಳುಹಿಸಿ ಕೊಡಲು ಕೋರಿದೆ.
- **ವಾರ್ಷಿಕ ಸಭೆ :** ರಾಜ್ಯದ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ವಾರ್ಷಿಕ ಸಭೆ"ಯನ್ನು ಡಿಸೆಂಬರ್ ಮಾಹೆಯಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ.

# ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯಲ್ಲಿ ಸಿಬ್ಬಂದಿಯವರ ಪಾತ್ರ ಮಹತ್ವದ್ದು : ಸಿಬ್ಬಂದಿ ಸಂಸ್ಥೆಯ ಮುಖವಾಣಿ

**ರಾಜಶೇಖರ ಹೂಗಾರ,** ಕಿರಿಯ ಅಧಿಕಾರಿ, ಕಲಬುರಗಿ ವಿಭಾಗ, ಕ.ರಾ.ಸೌ.ಸಂ.ಸ.ನಿ.

ಯಾವುದೇ ಒಂದು ಸಂಸ್ಥೆಯ ಯಶಸ್ಸಿನಲ್ಲಿ ಸಿಬ್ಬಂದಿಗಳ ವ್ಯಕ್ತಿತ್ವ ವಿಕಸನ ಒಂದು ನಿರ್ಣಾಯಕ ಪಾತ್ರ ವಹಿಸುತ್ತದೆ. ಸಿಬ್ಬಂದಿಗಳು ನಿಜವಾಗಿಯೂ ಸಂಸ್ಥೆಗಳ ಜೀವರಕ್ಷಕ ಎಂದರೆ ಅತಿಶಯೋಕ್ತಿಯಾಗದು. ಸಂಸ್ಥೆಗಳ ಯಶಸ್ಸು ಮತ್ತು ವೈಫಲ್ಯವು ಆ ಸಂಸ್ಥೆಯ ಸದಸ್ಯರ ಪಾಲುಗಾರಿಕೆ, ಆಡಳಿತ ಮಂಡಲಿಯ ನಿರ್ಣಾಯಕ ಪಾತ್ರದೊಂದಿಗೆ ಸಿಬ್ಬಂದಿಗಳ ಕಾರ್ಯದಕ್ಷತೆಯನ್ನು ಅವಂಬಿಸಿರುತ್ತದೆ ಎಂದು ಅನೇಕ ಆರ್ಥಿಕ ತಜ್ಞರು ಬಣ್ಣಿಸಿದ್ದಾರೆ. ಸಿಬ್ಬಂದಿಗಳು ಸಂಸ್ಥೆಗೆ ನಿಷ್ಠೆ, ಸಂಸ್ಥೆಯೊಂದಿಗೆ ಅವಿನಾಭಾವ ಸಂಬಂಧವನ್ನು ಮೈಗೂಡಿಸಿಕೊಳ್ಳುವುದು ಅವಶ್ಯಕ ಸಂಗತಿಯಾಗಿದೆ. ಸಿಬ್ಬಂದಿಗಳು ಕರ್ತವ್ಯ ಬದ್ಧರಾಗಿ, ಸಂಸ್ಥೆಗಳಿಗೆ ಎದುರಾಗುವ ಸವಾಲುಗಳನ್ನು ಮತ್ತು ವ್ಯತಿರಿಕ್ತ ಪರಿಣಾಮದ ಸಂದರ್ಭಗಳನ್ನು ಸುಲಭವಾಗಿ ಸ್ವೀಕರಿಸುವ ಕೌಶಲ್ಯತೆಯನ್ನು ಕರಗತ ಮಾಡಿಕೊಳ್ಳುವುದು ಸಿಬ್ಬಂದಿಗಳ ಜಾಣ್ಮೆ, ಪ್ರಬುದ್ಧತೆಗೆ ಕೈಗನ್ನಡಿಯಾಗುತ್ತದೆ.

ಆಕಸ್ಮಿಕವಾಗಿ ಬಂದು ಒದಗುವ ಸಮಸ್ಯೆಗಳನ್ನು ಮತ್ತು ಅಡೆತಡೆಗಳನ್ನು ಸೂಕ್ತ ರೀತಿಯಲ್ಲಿ ಒಬ್ಬರಾಗಿಯೇ ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು ವೈಯಕ್ತಿಕವಾಗಿ ಮತ್ತು ಸಂಸ್ಥೆಯ ಹಿತದೃಷ್ಠಿಯಿಂದ ಉತ್ತಮ. ಹತಾಶರಾಗದೇ ಸಮಸ್ಯೆಯನ್ನು ಬಗೆಹರಿಸುವ ಶೈಲಿಯು ಇತರೆ ಸಿಬ್ಬಂದಿಗಳಿಗೆ ಪ್ರೇರಣಾದಾಯಕ ವಾಗುತ್ತದೆ ಮತ್ತು ಅವರು ಉತ್ತಮ ನಿರ್ವಾಹಕರಾಗಿ ಹೊರಹೊಮ್ಮುತ್ತಾರೆ. ಕಾರ್ಯನಿರ್ವಾಹಕ ಮಂಡಲಿಯು ಕೆಲಸದ ಸ್ಥಳದಲ್ಲಿ ಸಿಬ್ಬಂದಿಗಳಿಗೆ ಮೇಲಿಂದ ಮೇಲೆ ವ್ಯಕ್ತಿತ್ವ ವಿಕಸನದ ತರಬೇತಿಗಳನ್ನು ಆಯೋಜಿಸುವುದರಿಂದ ಸಿಬ್ಬಂದಿಗಳಲ್ಲಿ ತಾಳ್ಮೆ, ವಿಶ್ವಾಸ, ದಕ್ಷತೆ ಹೆಚ್ಚಾಗಿ ಸಂಸ್ಥೆಗೆ ಸಂಪನ್ಮೂಲಗಳಾಗುತ್ತಾರೆ.

ನೌಕರರು ಜೀವನದಲ್ಲಿ ಧನಾತ್ಮಕ ವರ್ತನೆ ಹೊಂದಿರಬೇಕು. "ಶಿಕ್ಷಣವು ವ್ಯಕ್ತಿಯ ಉತ್ತಮ ಗೆಳೆಯ. ವಿದ್ಯಾವಂತನು ಸರ್ವ ಸ್ಥಳಗಳಲ್ಲಿಯೂ ಗೌರವಿಸಲ್ಪಡುತ್ತಾನೆ. ಶಿಕ್ಷಣವು ಸೌಂದರ್ಯ ಮತ್ತು ತಾರುಣ್ಯಗಳನ್ನು ಮೀರಿದೆ" ಎಂದು ಚಾಣಕ್ಯರು ಹೇಳಿದ್ದಾರೆ. ಅದಕ್ಕೆ ಕಲಿಕೆಗೆ ವಯಸ್ಸು ಇಲ್ಲ, ನೆನಪಿಡಿ.

ಸಿಬ್ಬಂದಿಯು ತನ್ನಲಿರುವ ಜ್ಞಾನವನ್ನು ಮತ್ತು ಕೌಶಲ್ಯವನ್ನು ಈ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸಿಕೊಳ್ಳಬೇಕು. ಸಿಬ್ಬಂದಿಗಳ ಅಸ್ತಿತ್ವ ಉಳಿಯಲು ತಮ್ಮಲ್ಲಿರುವ ಕೌಶಲ್ಯವನ್ನು ಮತ್ತು ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಬೇಕು. ಋಣಾತ್ಮಕ ವರ್ತನೆ ಮತ್ತು ಆಲೋಚನೆ ಹೊಂದಿರುವ ವ್ಯಕ್ತಿಯು ಬದಲಾಗುತ್ತಿರುವ ಸಮಯವನ್ನು ನಿಭಾಯಿಸಲು ಕಷ್ಟಕರವೆಂದು ಕಂಡುಕೊಳ್ಳುತ್ತಾನೆ.

ನೌಕರರು ಒಟ್ಟುಗೂಡಿ ಸಾಮರಸ್ಯದಿಂದ ತಮ್ಮ ಸಂಸ್ಥೆಯ ಬೆಳವಣಿಗೆಗಾಗಿ ಮತ್ತು ಉತ್ತಮ ಲಾಭಕ್ಕಾಗಿ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬ ನೌಕರನು ತನ್ನ ಸ್ವಾರ್ಥ ಉದ್ದೇಶಗಳನ್ನು ಬಿಟ್ಟು ಸಂಸ್ಥೆಗಾಗಿ ದುಡಿಯಬೇಕು. ತಂಡಗಳಲ್ಲಿ ಒಟ್ಟುಗೂಡಿ ಕೆಲಸ ನಿರ್ವಹಿಸುವುದು ಕಷ್ಟವೆಂದು ಕೆಲವರು ಭಾವಿಸುತ್ತಾರೆ.

ಸಂಸ್ಥೆಯಲ್ಲಿ ವಿವಿಧ ಹಿನ್ನೆಲೆ ಮತ್ತು ವಿವಿಧ ಸಂಸ್ಕೃತಿಯನ್ನು ಹೊಂದಿದ ವ್ಯಕ್ತಿಗಳಿಂದ ಕೂಡಿದ ತಂಡಗಳಿರುತ್ತವೆ. ಅಲ್ಲದೇ, ವಿವಿಧ ರೀತಿಯ ಮತ್ತು ವಿಭಿನ್ನ ವರ್ತನೆಗಳ ಮನಸ್ಸುಗಳ ವ್ಯಕ್ತಿಗಳು ಇರುತ್ತಾರೆ. ವಿವಿಧತೆಯಲ್ಲಿ ಏಕತೆ ಎನ್ನುವಂತೆ ಕೆಲಸದ ಸ್ಥಳದಲ್ಲಿ ಯಶಸ್ವಿಯಾಗಲು ಹೊಂದಾಣಿಕೆಯ ಸ್ವಭಾವವನ್ನು ಹೊಂದಿರಬೇಕು. ತುಂಬಾ ಕಠಿಣ ಸ್ವಭಾವದವರಾಗಿರಬಾರದು. ಇತರರಲ್ಲಿ ಯಾವಾಗಲು ನ್ಯೂನ್ಯತೆಗಳನ್ನು ಕಂಡು ಹಿಡಿಯಬೇಡಿ ಹಾಗೂ ಘರ್ಷಣೆಗಳು ಕೆಲಸದ ಸ್ಥಳದಲ್ಲಿ ನಕರಾತ್ಮಕ ಪರಿಸರಕ್ಕೆ ದಾರಿ ಮಾಡಿಕೊಡುತ್ತದೆ. ಅಲ್ಲಿ



ನೌಕರರು ನಿರೀಕ್ಷೆಯಂತೆ ಕಾರ್ಯನಿರ್ವಹಿಸಲು ಮತ್ತು ಮುಂದುವರಿಯಲು ಕಷ್ಟಕರವಾಗುತ್ತದೆ. ಉದ್ಯೋಗಿಗಳಿಗೆ ತಾಳ್ಮೆ, ಆತ್ಮವಿಶ್ವಾಸ ಮತ್ತು ಸಾಮರ್ಥ್ಯ ಹೆಚ್ಚಿಸುವ ಕಾರ್ಯಾಗಾರಗಳನ್ನು ಕೆಲಸದ ಸ್ಥಳಗಳಲ್ಲಿ ಆಯೋಜಿಸಬೇಕು.

ಉದ್ಯೋಗಿಗಳು ಸಂಸ್ಥೆಯ ಮುಖವಾಣಿಗಳಿದ್ದಂತೆ, ಅವರು ಉತ್ತಮವಾಗಿರಬೇಕು ಮತ್ತು ಇತರೆ ಸಹ ಉದ್ಯೋಗಿಗಳೊಂದಿಗೆ ಹಾಗೂ ಗ್ರಾಹಕರೊಂದಿಗೆ ವ್ಯವಹಾರವನ್ನು ನಿರೀಕ್ಷಿಸುವುದಷ್ಟೇ ಅಲ್ಲದೇ ಭವಿಷ್ಯದಲ್ಲಿ ಅವರೊಂದಿಗೆ ಆರೋಗ್ಯಪೂರ್ಣ ಸಂಬಂಧವನ್ನು ಕಾಪಾಡಿಕೊಳ್ಳಲು ಉದ್ಯೋಗಿಗಳು ತುಂಬಾ ವಿನಯಶೀಲರಾಗಿರಬೇಕು. ಒಂದು ಸಂಸ್ಥೆಯಲ್ಲಿ ಉದ್ಯೋಗಿಯು ಸ್ವಂತ ಗುರುತನ್ನು ಹೊಂದಿರಲು ಅತ್ಯುತ್ತಮವಾದ ಸಂವಹನ ಕೌಶಲ್ಯವನ್ನು ಹೊಂದಿರಬೇಕು. ವ್ಯಕ್ತಿತ್ವ ವಿಕಸನವು (Personality Development) ಪರಿಣಾಮಕಾರಿಯಾಗಿ ಸಂವಹನ ಮಾಡಲು ಸಿಬ್ಬಂದಿಗಳಿಗೆ ಕಲಿಸುತ್ತದೆ. ಸರಿಯಾದ ಪದಗಳನ್ನು ಆರಿಸಿ ಮತ್ತು ನಿಮ್ಮ ಸಂವಹನದ ವಿಷಯದ ಬಗ್ಗೆ ಬಹಳ ಜಾಗರೂಕರಾಗಿರಿ. ನೀವು ನಿಮ್ಮ ಗ್ರಾಹಕರೊಂದಿಗೆ ಯಾವ ರೀತಿ ವರ್ತಿಸಬೇಕು ಎಂದು ತಿಳಿದಿರಬೇಕು. ಅಸಭ್ಯವಾಗಿ ವರ್ತಿಸಿದಲ್ಲಿ ಸಂಸ್ಥೆಯಿಂದ ಹೊರ ಹಾಕಲ್ಪಡುತ್ತೀರಿ ಎನ್ನುವ ವಿಷಯ ಗಮನದಲ್ಲಿರಬೇಕು.

ಯಾವ ಒಬ್ಬ ಉದ್ಯೋಗಿಯು ಯಾವಾಗಲೂ ತನ್ನ ಸಹ ಉದ್ಯೋಗಿಗಳೊಂದಿಗೆ ಜಗಳವಾಡುತ್ತಿರುತ್ತಾನೋ ಅಂತಹ ಉದ್ಯೋಗಿಗಳನ್ನು ಅನಪೇಕ್ಷಿತ ಸದಸ್ಯರೆಂದು ಮತ್ತು ಎಲ್ಲರಿಂದ ತಿರಸ್ಕರಿಸ್ಪಡುವ ವ್ಯಕ್ತಿಯೆಂದು ಪರಿಗಣಿಸಲಾಗುತ್ತದೆ. ಉದ್ಯೋಗಿಯು ಗಮನದಲ್ಲಿಡುವ ಮುಖ್ಯ ಅಂಶವೆಂದರೆ ಸಂಸ್ಥೆಯ ಸಂಸ್ಕೃತಿಯನ್ನು ನಿರ್ಧರಿಸುವುದೇ ಸಿಬ್ಬಂದಿ.

ಸಿಬ್ಬಂದಿಗಳು ಸಂಸ್ಥೆಗಳ ಗುರಿಯನ್ನು ಮತ್ತು ಉದ್ದೇಶಗಳನ್ನು ಈಡೇರಿಸುವಲ್ಲಿ ಶ್ರಮಿಸಬೇಕು. ಸಂಸ್ಥೆಗಳನ್ನು ಕೇವಲ ಹಣ ಗಳಿಸುವ ಮೂಲವೆಂದು ಭಾವಿಸದೇ ಇದು ಸಮಾಜದಲ್ಲಿ ಒಂದು ಸ್ಥಾನಮಾನ ನೀಡಿರುವ ಆಶ್ರಯ ತಾಣವೆಂದು ತಿಳಿದಾಗ ಮಾತ್ರ ಸಂಸ್ಥೆಗಳ ಬಗ್ಗೆ ಗೌರವ, ಕಾಳಜಿ ಮನಸ್ಸಿನಲ್ಲಿ ತಾನಾಗಿಯೇ ಹುಟ್ಟಿಕೊಳ್ಳುತ್ತದೆ. ಅದರಂತೆ ಸಂಸ್ಥೆಯು ಸಿಬ್ಬಂದಿಗಳ ಕಾರ್ಯಸಾಧನೆಗೆ ಹಾಗೂ ಸೇವಾ ಹಿರಿತನಕ್ಕೆ ಅನುಗುಣವಾಗಿ ಮುಂಬಡ್ತಿ ನೀಡಿದರೆ ಸಿಬ್ಬಂದಿಗಳಿಗೆ ಇನ್ನೂ ಹೆಚ್ಚು ಕೆಲಸ ನಿರ್ವಹಿಸಲು ಉತ್ತೇಜನ ನೀಡಿದಂತಾಗುತ್ತದೆ.

ಸಂಸ್ಥೆಗಳ ಕಾರ್ಯನಿರ್ವಾಹಕ ಮಂಡಲಿಯು ಸಿಬ್ಬಂದಿಗಳಿಗೆ ಕಾರ್ಯ ಸಾಧನೆಯ ವಾತಾವರಣ ಸೃಷ್ಠಿಸುವುದರೊಂದಿಗೆ ಅವರಲ್ಲಿ ಪ್ರಾಮಾಣಿಕತೆ,

ಮುಂದಿನ ಪುಟಕ್ಕೆ...

# ನಿಮ್ಮ ಪ್ರಶ್ನೆ




# ನಮ್ಮ ಉತ್ತರ

– ಶ್ರೀಕಾಂತ್ ಬರುವೆ,
ಸಹ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**ಪ್ರಶ್ನೆ 1 : ಸುಸ್ತಿಯಿರುವ ಸಾಲವನ್ನು ವಸೂಲು ಮಾಡಲು ಸಿವಿಲ್ ಕೋರ್ಟಿಗೆ ದಾವೆ ಹೂಡಬಹುದೇ?**

**ಉತ್ತರ :** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 42ರನ್ವಯ ಸುಸ್ತಿ ಇರುವ ಸಾಲವನ್ನು ವಸೂಲು ಮಾಡಲು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಲು ಪ್ರತಿಷೇಧವಿರುತ್ತದೆ. ಕಲಂ 39ರನ್ವಯ ಸಾಲ ವಸೂಲಾತಿಗಾಗಿ ಸೌಹಾರ್ದ ಸಹಕಾರಿಗಳಿಗಾಗಿ ಇರುವ ಪ್ರತ್ಯೇಕ ನ್ಯಾಯಾಲಯದಲ್ಲಿ ದಾವೆ ಹೂಡಿ ಕಲಂ 41ರನ್ವಯ ಆದೇಶವನ್ನು ಪಡೆಯಬೇಕಾಗಿರುತ್ತದೆ. ನಂತರ ಸಹಕಾರಿ ಇಲಾಖೆಯ ಮಾರಾಟಾಧಿಕಾರಿಯ ಮೂಲಕ ಸಾಲ ವಸೂಲಾತಿ ಕ್ರಮವನ್ನು ಜರುಗಿಸಿ ಸಾಲ ವಸೂಲು ಮಾಡಬಹುದು. ಅಗತ್ಯವಿದ್ದಲ್ಲಿ ಅಮಲ್ಜಾರಿ ಕ್ರಮಕ್ಕಾಗಿ ಸಹಕಾರಿಗಳ ಸಹಾಯಕ ನಿಬಂಧಕರ ಅನುಮತಿ ಪಡೆದು ಸಿವಿಲ್ ನ್ಯಾಯಾಲಯದ ಮೂಲಕ ಸಾಲ ವಸೂಲಾತಿ ಕ್ರಮ ಜರುಗಿಸಬಹುದು.

**ಪ್ರಶ್ನೆ 2 : ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಸಹಕಾರಿಯಲ್ಲಿ ಕಾರ್ಯನಿರ್ವಹಿಸುವ ಕಾರ್ಯದರ್ಶಿ ಹಾಗೂ ಗೌರವ ಕಾರ್ಯದರ್ಶಿ ಹುದ್ದೆಗಳಿಗಿರುವ ವ್ಯತ್ಯಾಸವೇನು?**

**ಉತ್ತರ :** ಸಾಮಾನ್ಯವಾಗಿ ಸಹಕಾರಿಯ 'ಮುಖ್ಯ ಕಾರ್ಯನಿರ್ವಾಹಕ'ನನ್ನು 'ಕಾರ್ಯದರ್ಶಿ', 'ನಿರ್ವಾಹಕ' (Manager) ಎಂಬ ಪದನಾಮದಿಂದಲೂ ಸಹ ಕರೆಯಲಾಗುತ್ತದೆ. ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ 'ಗೌರವ ಕಾರ್ಯದರ್ಶಿ' ಎನ್ನುವ ಯಾವುದೇ ಹುದ್ದೆಯ ಕುರಿತು ಪ್ರಸ್ತಾಪವಿರುವುದಿಲ್ಲ. ಆದರೂ ಸಹ ಸಹಕಾರಿಯು ತನ್ನ ಸೇವಾ ನಿಯಮದಲ್ಲಿ 'ಗೌರವ ಕಾರ್ಯದರ್ಶಿ' ಹುದ್ದೆಯನ್ನು ಸೃಷ್ಟಿಸಬಹುದಾಗಿದೆ. ಹಾಗೇ ಸೃಷ್ಟಿಸಲಾದ ಗೌರವ ಕಾರ್ಯದರ್ಶಿ ಹುದ್ದೆಯ ಜವಬ್ದಾರಿ ಮತ್ತು ಅಧಿಕಾರಗಳ ಕುರಿತು ಸೇವಾ ನಿಯಮದಲ್ಲಿ ಉಲ್ಲೇಖವಿರುವುದು ಒಳಿತು. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಾಯ್ದೆ, 1997ರ ಕಲಂ 2(ಸಿ)ಯಲ್ಲಿ 'ಮುಖ್ಯ ಕಾರ್ಯನಿರ್ವಾಹಕ' ಎಂದರೆ ಸಹಕಾರಿಯ ಅಥವಾ ಸಂಯುಕ್ತ ಸಹಕಾರಿಯ ಉಪವಿಧಿಗಳ ಅಡಿ ಮುಖ್ಯ ಕಾರ್ಯನಿರ್ವಾಹಕನ ಪ್ರಕಾರ್ಯಗಳನ್ನು ನಿರ್ವಹಿಸುವ, ಯಾವುದೇ ಪದನಾಮದಿಂದಾಗಲಿ ಕರೆಯಲ್ಪಡುವ, ಸಹಕಾರಿ ಅಥವಾ ಸಂಯುಕ್ತ ಸಹಕಾರಿ ಮಂಡಲಿಯಿಂದ ನೇಮಕಗೊಂಡ ಯಾವೊಬ್ಬ ನೌಕರ.

**ಪ್ರಶ್ನೆ 3 : ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಒಬ್ಬನೇ ಸದಸ್ಯ ಏಕಪಕ್ಷೀಯವಾಗಿ 8–10 ಪ್ರಶ್ನೆಗಳನ್ನು ಸಭೆ ನಡೆಯುವ ಸಮಯ ದಲ್ಲಿಯೂ ಪ್ರಶ್ನಿಸಲು ಅಧಿಕಾರವಿದೆಯೇ? ಅಥವಾ ಲಿಖಿತದ ಮೂಲಕ ಒಂದು ವಾರದ ಮೊದಲು ಕಳುಹಿಸಬೇಕೆ?**

**ಉತ್ತರ :** ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರುಗಳು ಪ್ರಶ್ನೆ ಕೇಳುವ ಕುರಿತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, 2004ರಲ್ಲಿ ಉಲ್ಲೇಖವಿರುವುದಿಲ್ಲ. ಆದರೆ, ಸಹಕಾರಿಯು ಈ ಕುರಿತು ನಿಯಮವನ್ನು ರೂಪಿಸಿಕೊಂಡಿದ್ದಲ್ಲಿ ಅದರಂತೆ ಕ್ರಮವಹಿಸ ಬಹುದಾಗಿರುತ್ತದೆ. ಸಾಮಾನ್ಯವಾಗಿ ವಾರ್ಷಿಕ ಸಾಮಾನ್ಯ ಸಭೆಯ ದಿನಾಂಕಕ್ಕೆ ಏಳು ದಿನಗಳ ಪೂರ್ವದಲ್ಲಿ ಪ್ರಶ್ನೆಗಳನ್ನು ಲಿಖಿತದಲ್ಲಿ ಕಳುಹಿಸಿದಲ್ಲಿ ಸಹಕಾರಿಯು ದಾಖಲೆಗಳನ್ನು ಪರಿಶೀಲಿಸಿ ಸೂಕ್ತವಾದ ಉತ್ತರ ನೀಡಲು ಸಹಕಾರಿಯಾಗುತ್ತದೆ. ಸಭೆ ನಡೆಯುವ ಸಂದರ್ಭದಲ್ಲೇ ಪ್ರಶ್ನೆಗಳನ್ನು ಕೇಳಿದಲ್ಲಿ ದಾಖಲೆಗಳನ್ನು ಪರಿಶೀಲಿಸಿ ಸೂಕ್ತ ಉತ್ತರ ನೀಡುವುದು ಕಷ್ಟಸಾಧ್ಯವಾಗುತ್ತದೆ. ಈ ಕುರಿತು ಸಹಕಾರಿಯು ನಿಯಮ ರೂಪಿಸಿಕೊಳ್ಳುವುದು ಹೆಚ್ಚು ಸೂಕ್ತ.

---

... ಹಿಂದಿನ ಪುಟದಿಂದ

ಪಾರದರ್ಶಕತೆ ಹೆಚ್ಚಾಗಲೂ ಆದತ್ಯೆ ನೀಡಬೇಕು. ಕಾರಣ ಇಂದು ಉನ್ನತ ವ್ಯಾಸಂಗ ಮಾಡಿದವರನ್ನು ಮತ್ತು ಉತ್ತಮ ಕೌಶಲ್ಯಗಳನ್ನು ಹೊಂದಿದ ಸಿಬ್ಬಂದಿಗಳನ್ನು ಸಂಸ್ಥೆಗಳು ಪಡೆಯಬಹುದು. ಆದರೆ, ಪ್ರಾಮಾಣಿಕ ಸಿಬ್ಬಂದಿಗಳನ್ನು ಪಡೆಯುವುದು ಕಷ್ಟಸಾಧ್ಯ. ಇಂದು ಸಂಸ್ಥೆಗಾಗಿ ದುಡಿಯುವ ಸಿಬ್ಬಂದಿಗಳ ಸಂಖ್ಯೆ ಇಳಿಮುಖವಾಗುತ್ತಿರುವುದು ಕಹಿ ಸತ್ಯವಾಗಿದೆ.

ನೌಕರರಲ್ಲಿ ಕೆಲಸದ ಅನಿಶ್ಚಿತತೆ ಕಾಡದಂತೆ ಒಂದು ನಿಶ್ಚಿತತೆಯನ್ನು ಸಂಸ್ಥೆಯು ನೀಡಿದಾಗ ಮತ್ತು ನೌಕರರ ಅವಲಂಬಿತರಿಗೆ ಆಕಸ್ಮಿಕವಾಗಿ ಬಂದೊದಗುವ ಆರೋಗ್ಯ ಸಮಸ್ಯೆಗಳಿಂದಾಗಿ ಎದೆಗುಂದುವ ಸಿಬ್ಬಂದಿಗಳಿಗೆ ಸಂಸ್ಥೆಯ ಕಾರ್ಯನಿರ್ವಾಹಕ ಮಂಡಲಿಯು ಆತ್ಮಸ್ಥೈರ್ಯ ನೀಡುವುದರ ಜೊತೆಗೆ ಅವಲಂಬಿತರಿಗೆ ಸೂಕ್ತ ಆರೋಗ್ಯ ವಿಮೆ ನೀಡುವುದರಿಂದ ಅಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿಯೂ ವಿಚಲಿತರಾಗದೇ ಸಂಸ್ಥೆಯ ಏಳಿಗೆಗೆ ಪೂರಕವಾಗಿರುತ್ತಾರೆ. ಸಿಬ್ಬಂದಿಗಳು ಯಾವಾಗಲೂ ಕಾರ್ಯನಿರ್ವಾಹಕ ಮಂಡಲಿಗೆ, ಹಿರಿಯ ಅಧಿಕಾರಿಗಳಿಗೆ ವಿಧೇಯಕವಾಗಿರಬೇಕು ಜೊತೆಗೆ ಶಿಷ್ಟಾಚಾರ ಪಾಲನೆಯಲ್ಲಿ ಯಾವುದೇ ಲೋಪವಾಗದಂತೆ ಸದಾ ಎಚ್ಚರ ವಹಿಸುವುದರಿಂದ ಸಿಬ್ಬಂದಿಗಳಲ್ಲಿ ಶಿಸ್ತು ಎದ್ದು ಕಾಣುತ್ತದೆ.

ವ್ಯಕ್ತಿತ್ವ ವಿಕಸನವು ವ್ಯಕ್ತಿತ್ವವನ್ನು ಹೆಚ್ಚಿಸುತ್ತದೆ ಮತ್ತು ವೃತ್ತಿಪರತೆಯಲ್ಲಿ ಪ್ರೌಢಿಮೆಯನ್ನು ಹೆಚ್ಚಿಸುವುದರ ಮೂಲಕ ಸಿಬ್ಬಂದಿಗಳ ಯಶಸ್ಸಿನೊಂದಿಗೆ ಸಂಸ್ಥೆಯ ಯಶಸ್ಸಿಗೆ ಕೊಡುಗೆಯಾಗುತ್ತದೆ.



# ಪ್ರಕೃತಿಯ ಋಣ ತೀರಿಸು

ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

ಪಾರಮಾರ್ಥಿಕ ಚಿಂತನೆಯ ಕವಿ ಡಿ.ವಿ.ಜಿ.ಯವರು ಈ ಭೂಮಿಯ ಮೇಲಿನ ಬದುಕನ್ನು ಸವೆಯಿಸಲು ಮಾನವರು ಪಡುತ್ತಿರುವ ಅವಿರತ ಬೆದಕಾಟ, ಅರಚಾಟ, ಕಿರುಚಾಟ, ಪರಚಾಟಗಳನ್ನು ಕಂಡು ನಮ್ಮೆಲ್ಲರ ಹುಟ್ಟಿಗೆ ಮೂಲವಾದ ನಿಸರ್ಗಕ್ಕೆ ಏನೇನೂ ಕೊಡುಗೆಯನ್ನೀಯದೆ ಕೃತಘ್ನನಾಗಿರುವುದನ್ನು ಕಂಡು ವ್ಯಕ್ತಪಡಿಸಿರುವ ಅಭಿಪ್ರಾಯ ಸಾರವೇ ಇಂದಿನ ಪದ್ಯವಾಗಿದೆ.

ಕೇಂದ್ರ, ರಾಜ್ಯ ಸರ್ಕಾರಗಳಿಂದ ಹಾಗೂ ಮಹಾನಗರಪಾಲಿಕೆ ಮತ್ತು ಪಂಚಾಯಿತಿಗಳಿಂದ ವಿಧಿಸುತ್ತಿರುವ ವಿವಿಧ ತೆರಿಗೆಗಳಾದ ವರಮಾನ ತೆರಿಗೆ, ವಾಣಿಜ್ಯ ತೆರಿಗೆ, ನಿವೇಶನ ತೆರಿಗೆ, ಸಂಪತ್ತಿನ ತೆರಿಗೆ ಇತ್ಯಾದಿಗಳನ್ನು ಪಾವತಿಸುತ್ತೇವೆ. ಆದರೆ, ಅದೇಕೋ ಪಂಚಭೂತಗಳಾದ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳಿಂದ ನಮಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಪಡೆದಿದ್ದರೂ ಪ್ರಕೃತಿಗೆ ಯಾವುದೇ ರೀತಿಯ ತೆರಿಗೆಯನ್ನು ಪಾವತಿಸುತ್ತಿಲ್ಲ. ನಮಗೆ ಕೊಡಮಾಡಲ್ಪಟ್ಟಿರುವ ದೇಹ, ವಿವಿಧ ಅಂಗಾಗಗಳು, ಶ್ರವಣ ಶಕ್ತಿ, ದೃಷ್ಟಿ ಶಕ್ತಿ, ದೇಹ ಬಲ ಇವೆಲ್ಲವನ್ನೂ ನಿಸರ್ಗದಿಂದಲೇ ಪಡೆದಿದ್ದೇವೆ. ಹೀಗೆ ಪಡೆದ ವಿವಿಧ ಶಕ್ತಿಗಳಿಗೆ, ಸವಲತ್ತುಗಳಿಗೆ ಪ್ರತ್ಯುತ್ತರವಾಗಿ ಕೊಡಬೇಕೆಂಬ ಅಂಶ ಮಾತ್ರ ಚಿಂತನೆಯೂ ನಮ್ಮಗಳಲ್ಲಿಲ್ಲವೆಂಬ ಅಂಶವನ್ನು ಗಮನಿಸಿದ ಕವಿ ಡಿ.ವಿ.ಜಿ.ಯವರು ಪಾವತಿಸಬೇಕಾದ ಬಾಕಿಯನ್ನು ತೆರಿಗೆಯ ರೂಪದಲ್ಲಿ ಪಾವತಿಸೆಂದು ಕೋರುತ್ತಿದ್ದಾರೆ. ಪದ್ಯದ ಚಮತ್ಕಾರಿಕೆಯನ್ನು ಗಮನಿಸಿ.

**"ತೆರಿಗೆಗಳು ಹಲವುಂಟು ಪ್ರಕೃತಿಗಂ ಸಲ್ಲುವುವು**
**ತೆರದೆ ನೀಂ ಮರೆಯೆ ದಂಡಿಪಳಾಕೆ ಮುನಿದು**
**ಕರಣಂಗಳಾಕೆಯವು ಮಿತದೊಳವುಗಳ ಬಳಸಿ**
**ತೆರುಸಲುವ ಬಾಡಿಗೆಯ ಮಂಕುತಿಮ್ಮ"**

ಯಾವುದೋ ಸೌಲಭ್ಯವನ್ನು ಪಡೆದಿದ್ದರ ಕುರುಹಾಗಿ ತೆರಿಗೆಯನ್ನು ಪಾವತಿಸುತ್ತೇವೆ. ಅಂತೆಯೇ ದೇಹೇಂದ್ರಿಯಗಳನ್ನು ಪಡೆದು ಸುಖಿಸಿದ್ದರ ಕುರುಹಾಗಿ ನಾವುಗಳು ಪ್ರಕೃತಿಗೆ ತೆರಿಗೆಯನ್ನು ಬಾಡಿಗೆಯ ರೂಪದಲ್ಲಿ ಪಾವತಿಸಲು ಕೋರುತ್ತಾ, ಕೊಡಲೇಬೇಕಾದ ಅಂತಹ ತೆರಿಗೆಯನ್ನು ದುರ್ಬಲರಿಗೆ ದಾನದ ರೂಪದಲ್ಲಿ, ದೈವಾರಾಧನೆ ಕಾರ್ಯದಲ್ಲಿ, ಗುರುಹಿರಿಯರುಗಳಿಗೆ ಪಾವತಿಸದಿದ್ದಲ್ಲಿ ಪ್ರಕೃತಿಯು ನಿಖರವಾದ ಲೆಕ್ಕವನ್ನರಿಸಿಕೊಂಡಿದ್ದು, ಕೊಡದಿದ್ದ ನಮ್ಮ ವಿಫಲತೆಯನ್ನು ಗಮನಿಸಿ ಸೂಕ್ತ ಶಿಕ್ಷೆಯನ್ನು ತಪ್ಪದೇ ನೀಡಲಿದ್ದಾಳೆಂದು ಎಚ್ಚರಿಸುತ್ತಿದ್ದಾರೆ. ಸರ್ವಶಕ್ತನ ಜ್ಞಾನದ ವಿಸ್ತಾರತೆಯ ಹಾಗೂ ನಮ್ಮ ಮಿತ ಬುದ್ಧಿಶಕ್ತಿಯ ಬಗ್ಗೆ ಆಂಗ್ಲ ಭಾಷಾ ಉಕ್ತಿ ಹೀಗೆ ಉವಾಚಿಸುತ್ತದೆ GOD has his own predermined ways and means, whereas we know not of them.

ಡಿ.ವಿ.ಜಿ.ಯವರ ಮೂಲ ಚಿಂತನೆ ಋಣ ತೀರಿಸುವಿಕೆ. ಪಡೆದಿದ್ದೀಯಾದ್ದರಿಂದ ಕೊಡಲು ಸಿದ್ಧನಾಗೆಂಬುದು ಅವರ ಪದ್ಯದ ಇಂಗಿತವಾಗಿದೆ.

ಕೊಟ್ಟು ನಂತರ ಹೇರಳವಾಗಿ ಪಡೆದುಕೊಂಡ ಒಂದು ಪೌರಾಣಿಕ ಕಥೆ ನೆನಪಿಗೆ ಬರುತ್ತದೆ. ಒಂದು ದಿನ ಶ್ರೀ ಕೃಷ್ಣನು ತನ್ನ ತಂಗಿಯರಾದ ಸುಭದ್ರೆ ಹಾಗೂ ದ್ರೌಪದಿಯರೊಂದಿಗೆ ವಿಹಾರಾರ್ಥವಾಗಿ ಕಾಡಿನಲ್ಲಿ ನಡೆದಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಇವರೀರ್ವರಲ್ಲಿ ನನ್ನ ಮೇಲೆ ಯಾರಿಗೆ ಎಷ್ಟು ಪ್ರೀತಿಯಿದೆ ಎಂದು ಪರೀಕ್ಷಿಸಲಿಚ್ಛಿಸಿ ನಾಟಕೀಯವಾಗಿ ತನ್ನ ಬೆರಳಿಗೊಂದು ಮುಳ್ಳು ಹೊಕ್ಕಿದಂತೆಯೂ ಧಾರಕಾರವಾಗಿ ರಕ್ತ ಹರಿಯುತ್ತಿರುವಂತೆಯೂ ನಟಿಸಲಾಗಿ ಸ್ವಂತ ತಂಗಿಯಾದ ಸುಭದ್ರೆಯು "ಅಣ್ಣಾ ನಿನಗೆ ಮುಳ್ಳು ಹೊಕ್ಕಿತೇ? ನಿನ್ನ ರಕ್ತ ಹಾಳಾಗಬಾರದು" ಎಂಬ ಬಾಯಿ ಮಾತಿನ ಕನಿಕರದಿಂದ ಸುಮ್ಮನಾಗುತ್ತಾಳೆ, ಆದರೆ ಸಾಕು ತಂಗಿಯಾದ ದ್ರೌಪದಿಯು ಕ್ಷಣ ನಷ್ಟವಿಲ್ಲದೇ ತನ್ನ ಸೀರೆಯ ಸೆರಗನ್ನೇ ಹರಿದು "ಅಣ್ಣಾ ನಿನ್ನ ರಕ್ತ ಹಾಳಾಗಬಾರದು" ಎಂದು ಕಾರ್ಯತತ್ಪರಳಾಗಿ ರಕ್ತ ಸೋರುವುದನ್ನು ನಿಲ್ಲಿಸುತ್ತಾಳೆ. ಅವಳು ಸೇವೆಗೈಯ್ದದ್ದನ್ನು ಭಗವಂತನು ಬಹು ಉದಾರ ದೃಷ್ಟಿಯಿಂದ ವೀಕ್ಷಿಸಿ "ತಂಗೀ ನನಗೆ ಬೇಕಾದಾಗ ವಸ್ತ್ರವನ್ನು ನೀಡಿ ರಕ್ತದ ಸೋರುವಿಕೆಯಿಂದ ರಕ್ಷಿಸಿದ್ದೀಯ, ಅಂತೆಯೇ ನಿನಗೆ ಬೇಕಾದಾಗ ಎಷ್ಟು ಬೇಕೋ ಅಷ್ಟಲ್ಲ ಬೇಕಾದ್ದಕ್ಕಿಂತ ಹೆಚ್ಚಾಗಿ ವಸ್ತ್ರದಾನ ಮಾಡುವೆ" ಎಂಬ ಅಭಯವನ್ನೀಯುತ್ತಾನೆ. ಇದರ ಅರ್ಥವತ್ತಾದ ಮುಂದುವರಿಕೆಯೇ "ನೀಚ ದುರ್ಯೋಧನ ದುಶ್ಯಾಸನರಿಂದ ದ್ರೌಪದಿಯ ವಸ್ತ್ರಾಪಹರಣ ಹಾಗೂ ಶ್ರೀ ಕೃಷ್ಣನಿಂದ ಅಪಾರ ವಸ್ತ್ರ ದಾನದ ಪ್ರಸಂಗ".

ಇದರಿಂದ ನಾವು ಗ್ರಹಿಸಬೇಕಾದ ಮಹತ್ವದ ಅಂಶವೆಂದರೆ "ಕೊಡು" ಮತ್ತು "ಪಡೆ". ನಾವುಗಳೇಕೋ ಕೊಡಲೇ ಒಲ್ಲೆವು. ವಿಧಿ ವಿಧಾತ, ದಾತ, ಬ್ರಹ್ಮ ದೈವ ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುವ ಮೂಲ ಶಕ್ತಿಯು ನಿಯಮಾನುಸಾರ ಸೃಷ್ಠಿ, ಸ್ಥಿತಿ, ಲಯ ಕಾರ್ಯನಿರ್ವಹಿಸುತ್ತಾ ನಿಖರವಾದ ಲೆಕ್ಕವಿರಿಸಿ ಸಾಧಿಸುವುದದೆಲ್ಲವನು ನಿಲ್ಲದೇ ತಪ್ಪದೆ ಬಿಡದೆ. ಈ ಎಲ್ಲಾ ಚಟುವಟಿಕೆಗಳ ಮೂಲಕರ್ತೃವಿನ ಆಳ್ವಿಕೆ ಕಾಣದವನಾಳ್ಕೆಯೆನಿಸಿಕೊಂಡಿದೆ (Invisible Administrator).

ಆದ್ದರಿಂದ, ಕಾಣಿಸಿಕೊಳ್ಳದಿದ್ದರೂ ಇದ್ದೇ ಇರುವ ಹಾಗೂ ದೈನಂದಿನ ಎಲ್ಲಾ ಚಟುವಟಿಕೆಗಳನ್ನು ಚಾಚೂ ತಪ್ಪದೇ ನಿರ್ವಹಿಸುತ್ತಿರುವ ಭಗವಂತನ ನಿರಂತರ ಇರುವಿಕೆ ಹಾಗೂ ಅವನ ಲೆಕ್ಕಾಚಾರದ ನಿಯಮಗಳನ್ನು ಅರಿತು ನಮ್ಮ ಬದುಕಿನ ಬಗೆಯನ್ನು ಬದಲಿಸಿಕೊಂಡು ಸರ್ವರೂ ಸಹೋದರರಂತೆ ಸಹಕಾರದಿಂದ ಬಾಳಿರೆನ್ನುವುದೇ ಈ ಮೇಲಿನ ಪದ್ಯದ ಸಾರವಾಗಿದೆ.

# ಸಾಮಾಜಿಕ ಬದಲಾವಣೆಯಲ್ಲಿ ಸಹಕಾರದ ಪಾತ್ರ

ಶ್ರೀ ಸಿ.ಎನ್.ಪರಶಿವಮೂರ್ತಿ, ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಮೈಸೂರು.



... ಹಿಂದಿನ ಸಂಚಿಕೆಯಿಂದ

## ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆ 1997

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ, ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧರಿತವಾದ, ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂ ರಚನೆಗೆ ಪ್ರೋತ್ಸಾಹ ನೀಡುವುದು".

ಸಹಕಾರ ಆಂದೋಲನಕ್ಕೆ ಉತ್ತೇಜನ ನೀಡಲು ಕರ್ನಾಟಕ ಸರ್ಕಾರ ರಾಷ್ಟ್ರದಲ್ಲಿಯೇ ಪ್ರಥಮವಾಗಿ "ಸಹಕಾರ ನೀತಿ"ಯನ್ನು ರೂಪಿಸಿತು. ಈ ನೀತಿಯನ್ವಯ ಸಹಕಾರಿ ಆಂದೋಲನದ ಬೆಳವಣಿಗೆಗೆ ಬೇಕಾದ ಎಲ್ಲಾ ಕಾನೂನಿನ ಮಾರ್ಪಾಡು ಮಾಡಲು ಅವಶ್ಯಕವಿದೆಯೋ, ಅದನ್ನು ಮಾಡುವುದರ ಜೊತೆಗೆ ಪ್ರತ್ಯೇಕವಾಗಿ ಒಂದು ಹೊಸ ಕಾನೂನು ತಂದು ಸಹಕಾರಿಗಳಿಗೆ ಪೂರ್ಣ ಪ್ರಮಾಣದ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕೊಡುವುದು ಮತ್ತು ನಿಬಂಧಕರ (ಸರ್ಕಾರದ) ಮಧ್ಯ ಪ್ರವೇಶ ಇರದಂತೆ ಕಾನೂನು ರೂಪಿಸುವುದು ಎಂದು ತಿಳಿಸಿದೆ. ಅಂದರೆ ಸಹಕಾರಿಗಳೇ ತಮ್ಮ ಜವಾಬ್ದಾರಿಯರಿತು, ತಮ್ಮ ಆರ್ಥಿಕ ಅಭಿವೃದ್ಧಿಗೆ ತಮ್ಮ ಸಂಪನ್ಮೂಲವನ್ನೇ ಆಧರಿಸಿ ಬೆಳೆಯಬೇಕೆಂಬ ದೃಢ ನಿರ್ಧಾರ ತೆಗೆದುಕೊಳ್ಳಬೇಕು. ನಿಬಂಧಕರು ತಮ್ಮ ಅಧಿಕಾರ ಚಲಾಯಿಸುವಾಗ, ಆ ಅಧಿಕಾರ ಸೀಮಿತವಾಗಿರಬೇಕೆಂದು ಬಯಸಿ ಸಹಕಾರಿಯ ನೋಂದಣಿ ಮತ್ತು ಅದರ ರದ್ಧತಿಗೆ ಸೀಮಿತವಾಗಿ ಅಧಿಕಾರ ಕೊಡಬೇಕೆಂಬ ಆಶಯ ವ್ಯಕ್ತಪಡಿಸಿದೆ. ಸೌಹಾರ್ದ ಸಹಕಾರಿಗಳು ಸರ್ಕಾರದ ಯಾವುದೇ ರೀತಿಯ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯವಿಲ್ಲದೇ, ತನ್ನ ಆರ್ಥಿಕ ಸಂಪನ್ಮೂಲವನ್ನು ಕ್ರೋಢೀಕರಿಸಿ ಬೆಳೆಸಿಕೊಂಡು ಹೋಗಲು ಅನುವು ಮಾಡಿ ಕೊಡಲಾಗಿದೆ.

ಈ ಕಾಯಿದೆಯ ಮೂಲ ಉದ್ದೇಶ, ಸರ್ಕಾರದ/ ನಿಬಂಧಕರ ನಿಯಂತ್ರಣದಿಂದ ಹೊರತರುವುದು ಮತ್ತು ಸಹಕಾರಿಯನ್ನು ನಡೆಸಿಕೊಂಡು ಹೋಗುವ ಆಡಳಿತ ಮಂಡಲಿ ಮತ್ತು ಮಹಾಸಭೆಗೆ ಸದಸ್ಯರ ಬೇಡಿಕೆಗಳನ್ನು ಈಡೇರಿಸಲು ಕಾರ್ಯ ರೂಪಿಸಲು ಪೂರ್ಣ ಪ್ರಮಾಣದ ಅಧಿಕಾರ ನೀಡಲಾಗಿದೆ. ನಿಬಂಧಕರಿಗೆ ಇರುವ ಅಧಿಕಾರಗಳು ಈ ಕೆಳಕಂಡಂತೆ ಇದೆ.

1. ಒಂದು ಸಹಕಾರಿಯನ್ನು ಶಾಸನಬದ್ಧ ಸಂಸ್ಥೆಯಾಗಿ ನೋಂದಾಯಿಸುವುದು.
2. ನೋಂದಾವಣೆಯಾದ ಸಹಕಾರಿ – ಕಾರ್ಯ ನಿರ್ವಹಿಸುವಾಗ ಬರುವ ತೊಡಕುಗಳನ್ನು ಪರಿಹರಿಸಿಕೊಳ್ಳಲು ತಂದ ತಿದ್ದುಪಡಿಗಳನ್ನು ನೋಂದಾಯಿಸುವುದು.
3. ಸಹಕಾರಿಯ ಆಡಳಿತ ಮಂಡಲಿ, ಸದಸ್ಯರು, ನಿರ್ದೇಶಕರು ಅಥವಾ ಮತ್ತೊಂದು ಸಹಕಾರಿಯ ಜೊತೆ ಏರ್ಪಡುವ ವಿವಾದಗಳನ್ನು ಇತ್ಯರ್ಥ ಪಡಿಸುವುದು.
4. ಯಾವುದೇ ಒಂದು ಸಹಕಾರಿ ಲಿಖಿತವಾಗಿ ವಿಚಾರಣೆ ಮಾಡಲು ಮನವಿ ಸಲ್ಲಿಸಿದಾಗ ವಿಚಾರಣೆ ಮಾಡುವುದು.
5. ಸಹಕಾರಿ ಕಾರ್ಯನಿರ್ವಹಿಸಲು ನಿಷ್ಕ್ರಿಯಗೊಂಡಾಗ ಸಂಯುಕ್ತ ಸಹಕಾರಿ ಸಮಾಪನೆ ಮಾಡಿ, ಪ್ರಕ್ರಿಯೆ ಪೂರ್ಣಗೊಳಿಸಿ, ನೋಂದಣಿ ರದ್ಧತಿಗೆ ಅರ್ಜಿ ಸಲ್ಲಿಸಿದಾಗ, ಆ ಸಹಕಾರಿಯ ನೋಂದಣಿ ರದ್ದು ಪಡಿಸುವುದು.
6. ಚುನಾವಣಾಧಿಕಾರಿ ನೇಮಿಸಿ ಚುನಾವಣೆ ನಡೆಸುವುದು.



ಸಂವಿಧಾನದ 97ನೇ ತಿದ್ದುಪಡಿಯ ನಂತರ ಚುನಾವಣೆ ನಡೆಸಲು ಪ್ರತ್ಯೇಕ ಸಹಕಾರ ಚುನಾವಣಾ ಆಯೋಗವು ದಿನಾಂಕ 11.02.2013 ರಿಂದ ರಚನೆಯಾಗಿದ್ದು, ಆ ಸಂಸ್ಥೆಯೇ ಚುನಾವಣಾಧಿಕಾರಿ ನೇಮಿಸಿ, ನಿರ್ದೇಶಕರ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ ನಡೆಸುತ್ತಿದೆ.

ಈ ಮೇಲ್ಕಂಡ ತಾತ್ವಿಕ ಹಿನ್ನೆಲೆಯನ್ನು ಗಮನಿಸಿದಾಗ ಒಂದು ಸೌಹಾರ್ದ ಸಹಕಾರಿ ಕಾಯಿದೆ ಜಾರಿಯ ಉದ್ಧೇಶ ಸಹಕಾರಿಗಳಿಗೆ ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ ನೀಡುವುದು ಮತ್ತು ಅವುಗಳು ಸ್ವಯಂ ಆಡಳಿತ ನಡೆಸುವುದು ಮತ್ತು ಶಿಸ್ತು ಪಾಲಿಸುವುದು.

ನಿಬಂಧಕರ ಅಧಿಕಾರಗಳನ್ನು (ಸರ್ಕಾರದ) ನಿರ್ಬಂಧಿಸಿದ ನಂತರ ಸಹಕಾರಿಗಳು ಸಮರ್ಪಕ ಕೆಲಸ ನಿರ್ವಹಿಸುವ ಜವಾಬ್ದಾರಿ ಹೊತ್ತಿದ್ದರೂ ಎಲ್ಲಾ ಸಹಕಾರಿಗಳೂ ಅದನ್ನು ಪಾಲಿಸಲೇ ಬೇಕೆಂಬ ಷರತ್ತು ವಿಧಿಸಲಾಗದು. ಅಂತಹ ಸಂದರ್ಭಗಳಲ್ಲಿ ಸಹಕಾರಿಗಳನ್ನು ಒಂದು ಪ್ರಜಾಸತ್ತಾತ್ಮಕ ಸಂಸ್ಥೆಯೇ ನಿರ್ವಹಿಸಬೇಕೆಂಬ ಆಲೋಚನೆ ಮಾಡಿದ ರಾಜ್ಯ ಕರ್ನಾಟಕ. ಇದಕ್ಕಾಗಿ ಕಾಯಿದೆಯಲ್ಲಿಯೇ ಅಧ್ಯಾಯ IX ವನ್ನು ಸೃಷ್ಟಿಸಿ, ನಿಬಂಧಕರು ಚಲಾಯಿಸುತ್ತಿದ್ದ (ಹಳೆ ಕಾಯಿದೆಯಲ್ಲಿ) ಎಲ್ಲಾ ಅಧಿಕಾರಗಳನ್ನು (ಮೇಲೆ ಹೇಳಿದ 6 ವಿಷಯಗಳನ್ನು ಹೊರತು ಪಡಿಸಿ) "ಸಂಯುಕ್ತ ಸಹಕಾರಿ" ಎಂಬ ಒಂದು ಪ್ರಜಾಸತ್ತಾತ್ಮಕ ಸಂಸ್ಥೆಗೆ ವಹಿಸಿದೆ. ಇದು ಒಂದು ಶಾಸನಬದ್ಧ ಸಂಸ್ಥೆಯಾಗಿರುವುದರಿಂದ, ತಪ್ಪು ನಡೆದ ಸಂದರ್ಭದಲ್ಲಿ ಅವುಗಳನ್ನು ನಿಯಂತ್ರಿಸಿ ಮಾರ್ಗದರ್ಶನ ನೀಡಲು ಸೃಷ್ಠಿ ಮಾಡಲಾಗಿದೆ.

ಈ ಕಾಯಿದೆ ರಚಿಸಲು ಪ್ರೇರೇಪಣೆ ಮಾಡಿದ ವರದಿ ಕೇಂದ್ರ ಯೋಜನಾ ಆಯೋಗ ಶ್ರೀ ಚೌದರಿ ಬ್ರಹ್ಮಪ್ರಕಾಶ್ ಅವರ ನೇತೃತ್ವದಲ್ಲಿ ಕೊಟ್ಟ ವರದಿ. ಈ ವರದಿಯನ್ನಾಧರಿಸಿ ಬೇರೆ ಬೇರೆ ರಾಜ್ಯಗಳು ಹಾಲಿ ಜಾರಿಯಲ್ಲಿದ್ದ ಕಾಯಿದೆಗೆ

30ನೇ ಪುಟಕ್ಕೆ...

# ಮಾನ್ವಿಯ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕಿನ "ಆರ್ಥಿಕ ವಿಶ್ಲೇಷಣೆ"

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 18 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಒಂದಾದ ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕಿನ ಕಾರ್ಯಚಟುವಟಿಕೆಗಳನ್ನು ಅಂತರರಾಷ್ಟ್ರೀಯ ಪತ್ರಿಕಾ ಸಂಶೋಧನಾ ಸಮಿತಿಯವರು ಅಧ್ಯಯನ ನಡೆಸಿ ಸಲ್ಲಿಸಿರುವ ವರದಿಯ ಪ್ರಮುಖ ಅಂಶಗಳನ್ನು ಸಹಕಾರಿಗಳ ಅವಗಾಹನೆಗಾಗಿ ಪ್ರಕಟಿಸಲಾಗಿದೆ.

## An Economic Analysis of Manvi Pattana Souharda Sahakari Bank Niyamita

**Siddhartha S Vishwam, Dr. B S Chandrashekar for International Journal for Research in Applied Science & Engineering Technology (IJRASET)**

The Co-operative banks are as an important as commercial banks to provide quality financial Karnataka Government came out with the Karnataka Souharda Sahakari Act, 1997 framed on lines of the model Act. The act came in to force from January 01, 2001. Till date 18 Souharda Co-operative Banks are there in this fold.

### A. Origin of Manvi Pattana Souharda Sahakari Bank Niyamita

Manvi Pattana Souharda Sahakari Bank Niyamita (MPSSBN) was established in 1995. Under the Indian Banking Regulation Act the bank serves under Souharda Co-operative Act 1997. The bank has earned its status over the last decade as one of the leading under co-operative bank in the state with highest productivity per employee.

The bank offers a world-class infrastructure for its conduct their banking transactions this bank provides ATM (All Time Money), facilities for its customers and fixed deposit, varamahalaxmi deposit, senior citizen deposit, recurring deposit, gouri ganesha deposit, members family welfare recurring deposit and loans offered this banks to members, vehicle loan, over draft accounts loan, business loan, gold loan, mortgage loan, salary loan, pledge loan, ware house loan, receipt loan, small scale industry loan, Godown Construction Loan/Lift Irrigation Loan, housing loan and locker facilities and RTGS (Real Time Gross Settlement), NEFT (National Electronic Funds Transfer), E- Stamping

The bank is at present is functioning with numbers of 10 branch and around 10338 members. Gangavati, Hospet, Raichur, Karatagi, Lingasagur, Bellary, Koppal, Sirguppa, Hogri Bommanahalli. The Manvi Pattana Souharda Sahakari Bank Niyamita is one of the leading Souharda Co-operative Bank in Karnataka.

### Objectives of the Study

1) To study the growth and performance of the Manvi Pattana Souharda Sahakari Bank Niyamita.
2) To suggest suitable solutions on the basis of the findings of the study

### II. METHODOLOGY

The present study is based on secondary data. The required data collected from the annual Reports and Journals of Manvi pattana souharda sahakari bank niyamita. The data analysis carried out by using simple statistical technique like Mean, Standard Deviation and Co-efficient of Variation. The study covers a period of Five years (2012 to 2016).

**Table : 1 Growth of Manvi Pattana Souharda Bank Niyamita from 2012 to 2016**

(Rs. in lakhs)

| Years | 2012 | 2013 | 2014 | 2015 | 2016 | Mean | SD | CV |
|---|---|---|---|---|---|---|---|---|
| No. of Membership | 2313 | 2339 | 2630 | 3158 | 10338 | 4155.60 | 3472.75 | 83.50 |
| AGR | - | 1.12 | 12.44 | 20.08 | 227.36 | | | |
| Share Capital | 187.31 | 203.13 | 214.83 | 274.47 | 393.62 | 254.67 | 84.38 | 33.10 |
| AGR | - | 7.79 | 5.45 | 21.73 | 30.27 | | | |
| Reserves | 693.32 | 786.51 | 905.09 | 990.06 | 1067.91 | 888.58 | 151.06 | 17.00 |
| AGR | - | 11.85 | 13.10 | 8.58 | 7.29 | | | |
| Deposits | 2877.2 | 3256.17 | 4318.35 | 5843.09 | 15856.12 | 6430.19 | 5393.30 | 83.87 |
| AGR | ----- | 11.64 | 24.60 | 26.09 | 63.15 | | | |

It is clearly from the analysis that the number of membership was about 2313 lakh in 2012 which has increased to 10338 lakh in 2016. Share Capital is another important multiple of owned fund and every Souharda Co-operative Bank should make an attempt to improve share capital position in every year. The Share capital of this bank was about Rs. 187.31 lakh in 2012 which has increased to Rs.393.62 lakh in 2016. Reserve fund also another important component of owned fund and all Souharda Co-operative banks as per the Karnataka souharda co-operative act earmarks 25% statutory reserve apart from statutory reserves and makes other reserves includes building fund, education fund members death relief fund, staff welfare fund etc. During the 2012-16 the reserves of this bank was about Rs.693.32 lakh, which has increased to Rs.1067.91 lakh.

The Deposits mobilized by the banks may be classified as low cost deposit (Savings bank deposit, no cost deposit) Current deposit and high cost deposits are called term deposits in order to improve the profit and profitability. The deposit was about Rs.2877.20 lakh in 2012 which has increased to 15856.12 lakh in 2016.

**Table : 2 Financial Progress of the Manvi Pattana Souharda Sahakari Bank Niyamita**

(Rs. in lakhs)

| Years | 2012 | 2013 | 2014 | 2015 | 2016 | Mean | SD | CV |
|---|---|---|---|---|---|---|---|---|
| Loans & Advances | 2458.5 | 2589.36 | 2672.25 | 3709.77 | 10215.69 | 4329.11 | 3328.16 | 76.87 |
| AGR | ----- | 5.05 | 3.10 | 27.97 | 63.69 | | | |
| Investment | 1168.43 | 1607.07 | 2359.76 | 2307.16 | 5431.17 | 2574.72 | 1672.66 | 64.96 |
| AGR | ----- | 27.29 | 31.90 | -2.28 | 57.52 | | | |
| Net Profit | 119.75 | 134.25 | 121.59 | 89.29 | 103.84 | 113.74 | 17.42 | 15.31 |
| AGR | ----- | 10.80 | -10.41 | -36.17 | 14.01 | | | |
| Working Capital | 3904.63 | 4503.25 | 5590.44 | 7255.1 | 20774.39 | 8405.56 | 7030.70 | 83.64 |
| AGR | ----- | 13.29 | 19.45 | 22.94 | 65.08 | | | |

Loans and advances during 2012 to 2016. It is clear from the analysis that the loans and advances was about Rs.2458.50 lakh in 2012 has increased to Rs.10215.69 lakh in 2016. And Investment of this bank was Rs.1168.43 lakh in 2012 has increased to Rs. 5431.17 lakh in 2016. Net Profit is a yardstick to measure the managerial efficiency of the bank.

The bank is continuously earning net profit. Whereas a net profit of this bank was about Rs.119.75 lakh in 2012 has decreased to Rs.103.84 lakh in 2016. The working capital is considered as life blood of any organization, The Souharda Co-operative Banking sector is not an exception to this; the Souharda Co-operative Banks adopt different methods to determine the working capital. Growth trends of MPSSBN working capital during from 2012 to 2016 was about Rs.3904.63 lakh in 2012 which has increased to Rs.20774.39 lakh in 2016.

**Table : 3 Progress of Dividend and Net N.P.A's the Manvi Pattana Souharda Sahakari Bank Niyamita**

(Rs. in lakhs)

| Years | 2012 | 2013 | 2014 | 2015 | 2016 | Mean | SD | CV |
|---|---|---|---|---|---|---|---|---|
| Dividend | 20% | 21% | 23% | 17% | 12% | 19% | 0.04 | 21% |
| AGR | - | 4.76 | 8.70 | -35.29 | -41.67 | | | |
| Net N.P.A | 0.70 % | 1.00% | 0.00% | 0.00% | 0.00% | 0.34% | 0.005 | 1.47% |
| AGR | - | 30 | 0 | 0 | 0 | | | |

It is clear from the analysis that the dividend was about 20% in 2012 has decreased to 12 per cent lakh in 2016. Net NPA during 2012 to 2016. Was about 0.70% in 2012 has decreased to 0.00% to 2016.

### III. FINDINGS OF THE STUDY

A. The Share capital shows the positive growth because of increase in Membership over the years.

B. The Reserves of MPSSBN has tremendously increased from 693.32 lakh to 1067.91 lakh during the study period. Because of huge Share capital and deposits.

C. The Deposits increased from 2877.2 lakh to 15856.12 lakh during the study period. Because the positive belief of customers towards bank.

D. Loans and Advances of the bank increased to 10215.69 from 2458.5 lakh during year 2016. Because five branches of the bank have started a new scheme to provide micro finance to women and backward classes people.

E. Among the five-year study period lowest percent of Annual Growth Rate of Net profit observed during the year 2015, because net profit is 121.59 lakhs in 2014 and it reduced to 89.29 lakhs in 2015.

### IV. SUGGESTIONS

A. The effective steps may be taken to improve the Net Profit of Manvi Pattana Souharda Sahakari Bank Niyamita.

B. The bank should take essential steps to open No-frills account.

C. In order to increase investments, the bank should pay the dividend at regular intervals.

D. Bank should take necessary steps to recover the loans from customers, In order to reduce Non Performing Assets in future.

### V. CONCLUSION

The Manvi Pattana Souharda Sahakari Bank Niyamita Manvi, bank is one of the leading Souharda Co-operative Bank in Karnataka. Souharda Banks plays major role in development of urban and semi urban areas and removes all kinds of restrictions that have come to clog the free functioning of this bank. It works on the basis of co-operative principal. Souharda Cooperative Banks as a sound and healthy network of jointly owned, democratically controlled and ethically managed banking institution providing needs based quality banking services, essentially to the middle and lower middle classes and marginalized sections of the society. ■

... 27ನೇ ಪುಟದಿಂದ

ತಿದ್ದುಪಡಿ ಅಥವಾ ಮತ್ತೊಂದು ಕಾಯಿದೆ ಜಾರಿಗೆ ತಂದಿದ್ದರೂ ನಿಬಂಧಕರ ಅಧಿಕಾರವನ್ನು ದೊಡ್ಡ ಮಟ್ಟದಲ್ಲಿ ಮೊಟಕುಗೊಳಿಸಿ ಪ್ರಜಾಸತ್ತಾತ್ಮಕ ಆಡಳಿತಕ್ಕೆ ಒತ್ತು ಕೊಟ್ಟ ರಾಜ್ಯ ಕರ್ನಾಟಕ.

ಈ ಕಾಯಿದೆ ಜಾರಿಗೆ ಬಂದಾಗ ಸಹಕಾರ ಸಂಘಗಳ ಕಾಯಿದೆ, 1959ರಲ್ಲಿ ನೋಂದಣಿಯಾದ ಬಹಳಷ್ಟು ಸಹಕಾರ ಸಂಘಗಳು ವರ್ಗಾವಣೆ ಹೊಂದುತ್ತವೆಂದು ಬಹಳಷ್ಟು ಆಶಯ ಬಹಳಷ್ಟು ಸಹಕಾರಿ ಮುಖಂಡರು ಮತ್ತು ಹಲವು ಅಧಿಕಾರಿಗಳಲ್ಲಿತ್ತು. ಅಂದರೆ ಬಹಳಷ್ಟು ಸಂಘಗಳು ಸಹಕಾರಿಯಾಗಿ ಪರಿವರ್ತನೆ ಹೊಂದುತ್ತವೆಂದು.


ಏಕೆಂದರೆ, ಸಹಕಾರಿ ಮುಖಂಡರ ಸಭೆ ಸಮಾರಂಭ, ವಿಚಾರ ಸಂಕಿರಣ, ಕಾರ್ಯಾಗಾರ ಹಾಗೂ ಸಹಕಾರಿ ಸಮ್ಮೇಳನಗಳಲ್ಲಿ ನಿಬಂಧಕರ ನಿಯಂತ್ರಣ ತೆಗೆದು ಹಾಕಬೇಕೆಂದು ಒಕ್ಕೊರಲಿನಿಂದ ಪ್ರತಿಪಾದಿಸುತ್ತಿದ್ದರು. ಆದರೂ, ಬಹಳಷ್ಟು ಸಂಸ್ಥೆಗಳು ವರ್ಗಾವಣೆ ಹೊಂದಲಿಲ್ಲ. ಇದರಿಂದ ಸಹಕಾರಿಗಳು ಸರ್ಕಾರದ/ ನಿಬಂಧಕರ ನಿಯಂತ್ರಣ ಬೇಕೆಂದು ತೀರ್ಮಾನಿಸಿದಂತಾಗುತ್ತದೆ. ಅಂದರೆ ಸಹಕಾರಿಗಳು ತಮ್ಮ ಸಾಮರ್ಥ್ಯದಲ್ಲಿ ನಂಬಿಕೆ ಇಲ್ಲ ಎಂದಾಗುತ್ತದೆ.

ಇದಕ್ಕೆ ಪೂರಕವಾಗಿ ಸೌಹಾರ್ದ ಕಾಯಿದೆಯಲ್ಲಿ ಕರ್ತವ್ಯ, ಹಕ್ಕು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟವಾಗಿ ಸೇರಿಸಿರುವುದರಿಂದ ಅವುಗಳನ್ನು ನಿರ್ವಹಿಸಲು ಶಕ್ತಿ ಇಲ್ಲವೆಂದು ಅರ್ಥವಾಗಿ ಹಳೇ ಕಾಯಿದೆಯಲ್ಲಿ ಮುಂದುವರಿಯಲು ತೀರ್ಮಾನಿಸಿದಂತೆ ಕಾಣುವುದಿಲ್ಲವೇ? ಅಥವಾ ಸದಸ್ಯರ ಹಿತ ಮತ್ತು ಅವರ ಆರ್ಥಿಕ ಬೆಳವಣಿಗೆ ಬದಲಾಗಿ ತಮ್ಮ ಬೆಳವಣಿಗೆಗೆ ಅವಕಾಶಗಳು ಇಲ್ಲವೆಂದೇ? ಅಥವಾ ಸರ್ಕಾರದ, ನಿಬಂಧಕರ ನಿಯಂತ್ರಣದಲ್ಲಿಯೇ ಮುಂದುವರೆದರೆ, ರಾಜಕೀಯ ಪ್ರಭಾವದಿಂದ ಸಹಕಾರ ಸಂಘಗಳನ್ನು ನಿಯಂತ್ರಿಸಬಹುದೆಂಬ ನಂಬಿಕೆಯಿಂದಲೇ? ಸಹಕಾರ ಸಂಘಗಳ ಕಾಯಿದೆ, 1959ರಲ್ಲಿ ಆಡಳಿತ ಮಂಡಳಿಯಲ್ಲಿ ನಿಯಂತ್ರಣ, ನಾಮನಿರ್ದೇಶನ, ಸರ್ಕಾರದಿಂದ ಸಹಾಯಧನ, ಸಮಿತಿಗಳನ್ನು ರಾಜಕೀಯ ಪ್ರಭಾವದಿಂದ ರದ್ದುಗೊಳಿಸಲು ಅಥವಾ ರದ್ದುಗೊಳಿಸದಂತೆ ಪ್ರಭಾವ ಬೀರಲು ಸಾಧ್ಯವೆಂದು ಅಥವಾ ಸಮಾಪನೆಗೊಳಿಸದಂತೆ ಪುನಃಶ್ಚೇತನ ಮಾಡಲು ಸಾಧ್ಯವೆಂಬ ಭಾವನೆಯಿಂದ ಸೌಹಾರ್ದ ಕಾಯಿದೆಗೆ ಬರಲು ಹಿಂಜರಿಯುತ್ತಿರಬೇಕು.

ಇದರ ಜೊತೆಗೆ ಸೌಹಾರ್ದ ಕಾಯಿದೆಯಲ್ಲಿ ಸ್ವಾತಂತ್ರ್ಯ ಕೊಟ್ಟರೂ ಅದನ್ನು ಸ್ವೇಚ್ಛ್ಯತೆ ಎಂದು ತಿಳಿಯಲಾಗದೆಂಬ ನಂಬಿಕೆಯಿಂದ ವರ್ಗಾವಣೆಗೆ ಪ್ರಯತ್ನಿಸಿಲ್ಲವೇ ಅಥವಾ ಸಹಕಾರಿ ಇಲಾಖೆ ಅಧಿಕಾರಿಗಳಿಂದ ಸಕಾರಾತ್ಮಕ ಉತ್ತೇಜನ ಸಿಗದೇ ಇರುವುದರಿಂದಲೂ ವರ್ಗಾವಣೆಗೆ ಹಿಂಜರಿಕೆ ಇರಬಹುದು.

ಕರ್ನಾಟಕ ಸೌಹಾರ್ದ ಕಾಯಿದೆಯಲ್ಲಿ ನೋಂದಾವಣಿ ಆಗಲು ಕೆಲವು ದೃಢ ನಂಬಿಕೆಗಳು ಅವಶ್ಯಕ. ಪ್ರತಿಯೊಬ್ಬ ಸಹಕಾರಿ ನಿರ್ದೇಶಕ, ಸದಸ್ಯ ಅಥವಾ ಪದಾಧಿಕಾರಿ ಜವಾಬ್ಧಾರಿಯುತ, ಸ್ವಜನ ಪಕ್ಷಪಾತಿಯಲ್ಲದ, ಸೇವಾ ಮನೋಭಾವ ಹೊಂದಿದವನಿರಬೇಕು. ಅದಕ್ಕೂ ಮಿಗಿಲಾಗಿ ಸದಸ್ಯರ ಆರ್ಥಿಕ ಬೆಳವಣಿಗೆಯೇ ಸಹಕಾರಿಯ ಮೂಲ ಉದ್ಧೇಶ ಎಂದು ತಿಳಿದಿರಬೇಕು.

ಅಂದರೆ ಪ್ರತಿಯೊಬ್ಬ ಸದಸ್ಯನೂ ಸ್ವಾವಲಂಬಿಯಾಗಿ, ತನ್ನ ಕಾಲ ಮೇಲೆ ನಿಲ್ಲಲು ಅವಕಾಶ ಕಲ್ಪಿಸುವ ಅವಕಾಶ ಪೂರ್ಣ ಪ್ರಮಾಣದಲ್ಲಿ ಈ ಕಾಯಿದೆಯಲ್ಲಿ ಲಭ್ಯ, ಇದನ್ನು ಪಡೆಯಲು ಪ್ರತಿ ಸದಸ್ಯ ಸಹಕಾರಿಯ ಮಹಾಸಭೆ, ಆಡಳಿತ ಮಂಡಲಿಯ ಮುಖಾಂತರ ಪಡೆಯಲು ಅವಕಾಶ ಇದೆ ಹಾಗೂ ಇವುಗಳನ್ನು ಪಡೆಯಲು ಅವನು ಬದ್ಧ ಮತ್ತು ಜವಾಬ್ದಾರಿ ಇದೆ. ■



# RBI NEWS - OCTOBER 2017

▸▸ **K. Vittal Shetty,** Banking Consultant, kohimavittal@Hotmail.com, Mobile:9845699904

**Oct 04, 2017 :** Fourth Bi-monthly Monetary Policy Statement, 2017-18 Resolution of the Monetary Policy Committee (MPC) Reserve Bank of India.

On the basis of an assessment of the current and evolving macroeconomic situation at its meeting today, the Monetary Policy Committee (MPC) decided to:

• keep the policy repo rate under the liquidity adjustment facility (LAF) unchanged at 6.0 per cent.

Consequently, the reverse repo rate under the LAF remains at 5.75 per cent, and the marginal standing facility (MSF) rate and the Bank Rate at 6.25 per cent.

The decision of the MPC is consistent with a neutral stance of monetary policy in consonance with the objective of achieving the medium-term target for consumer price index (CPI) inflation of 4 per cent within a band of +/- 2 per cent, while supporting growth.

**The next meeting of the MPC is scheduled on December 5 and 6, 2017.**

| Policy Rates with effect from 02 AUGUST 2017 | % |
|---|---|
| POLICY REPO RATE | 6.00% |
| REVERSE REPO RATE | 5.75% |
| MARGINAL STANDING FACILITY RATE | 6.25% |
| BANK RATE | 6.25% |
| Reserve Ratios | % |
| Cash Reserve Ratio | 4.00% |
| Statutory Reserve Ratio WEF 14 OCTOBER 2017 | 19.50% |

## IMPORTANT NEWS

**1) October 4, 2017 :** Section 24 and Section 56 of the Banking Regulation Act, 1949 - Maintenance of SLR and holdings of SLR in HTM category

Fourth Bi-monthly Monetary Policy Statement, 2017-18 on October 04, 2017, it has been decided to reduce the SLR requirement of banks from 20.0 per cent of their Net Demand and Time Liabilities (NDTL) to 19.5 per cent from the fortnight commencing October 14, 2017.

Currently, the banks are permitted to exceed the limit of 25 per cent of the total investments under HTM category, provided the excess comprises of SLR securities and total SLR securities held under HTM category are not more than 20.5 per cent of NDTL. In order to align this ceiling on the SLR holdings under HTM category with the mandatory SLR, it has been decided to reduce the ceiling from 20.5 per cent to 19.5 per cent in a phased manner, i.e. 20 per cent by December 31, 2017 and 19.5 per cent by March 31, 2018.

Banks may shift investments to/from HTM with the approval of the Board of Directors once a year, and such shifting will normally be allowed at the beginning of the accounting year. In order to enable banks to shift their excess SLR securities from the HTM category to AFS/HFT to comply with instructions as indicated in paragraph 3 above, it has been decided to allow such shifting of the excess securities and direct sale from HTM category. This would be in addition

**Date : Oct 25, 2017**

**Scheduled Banks' Statement of Position in India as on Friday, October 13, 2017**

(Amount in Billions of)

| | | SCHEDULED COMMERCIAL BANKS | | | ALL SCHEDULED BANKS | | |
|---|---|---|---|---|---|---|---|
| | | 14-Oct-16 | 29-SEP-2017 * | 13-OCT-2017 * | 14-Oct-16 | 29-SEP-2017 * | 13-OCT-2017 * |
| I | a) Deposit | 99107.32 | 109658.65 | 108795.84 | 101785.25 | 112568.31 | 111716.91 |
| | i) Demand | 9198.52 | 12457.84 | 11463.89 | 9424.68 | 12734.14 | 11741.48 |
| | ii) Time | 89908.8 | 97200.75 | 97331.92 | 92360.57 | 99834.11 | 99975.4 |
| II | INVESTMENTS | 28734.76 | 33366.48 | 33689.8 | 29524.82 | 34327.69 | 34637.63 |
| III | BANK CREDIT | 73337.95 | 80076.98 | 79003.09 | 75593.27 | 82530.95 | 81463.17 |

Swabhimani Sahakari, Monthly, Publishing Date 5th, Posting Day 8th.
Posted at Bangalore PSO, Mysore Road, Bangalore 560026
Registered No. KA/BGW/1744/2017-19. RNI No. KARBIL - 2004/18001/Pages 32

to the shifting permitted at the beginning of the accounting year, i.e., in the month of April. Such transfer to AFS/HFT category as well as sale of securities from HTM category, to the extent required to reduce the SLR securities in HTM category in accordance with the regulatory instructions, would be excluded from the 5 per cent cap prescribed for value of sales and transfers of securities to/from HTM category under paragraph 2.3 (ii) of the Master Circular on Prudential Norms for Classification, Valuation and Operation of Investment Portfolio by Banks.

**October 4, 2017**

**NOTIFICATION**

In exercise of the powers conferred by sub-section (2A) of Section 24 read with Section 51 and Section 56 of the Banking Regulation Act, 1949 (10 of 1949) and in partial modification of the Notification Ref.DBR.No.BC.73/12.02.001/2016-17 dated June 7, 2017, the Reserve Bank hereby specifies that:

With effect from October 14, 2017, every commercial bank, primary (urban) co-operative bank, state cooperative bank and central co-operative bank shall maintain in India assets (referred to as 'SLR assets' in the above Notification) the value of which shall not, at the close of business on any day, be less than 19.5 per cent of their total net demand and time liabilities in India as on the last Friday of the second preceding fortnight, valued in accordance with the method of valuation specified by the Reserve Bank from time to time. All other instructions contained in the Notification dated June 7, 2017, referred to above, shall continue to apply.

**2) Date : Oct 17, 2017 :** North East Small Finance Bank Limited commences operations.

North East Small Finance Bank Limited has commenced operations as a small finance bank with effect from October 17, 2017. The Reserve Bank has issued a licence to the bank under Section 22 (1) of the Banking Regulation Act, 1949 to carry on the business of small finance bank in India.

RGVN (North East) Microfinance Limited, Guwahati was one of the ten applicants which were issued in-principle approval for setting up a small finance bank, as announced in the press release on September 16, 2015.

**3) Date : Oct 21, 2017 :** RBI clarifies that linking Aadhaar to bank accounts is mandatory.

Some news items have appeared in a section of the media quoting a reply to a Right to Information Act application that Aadhaar number linkage with bank accounts is not mandatory.

The Reserve Bank clarifies that, in applicable cases, linkage of Aadhaar number to bank account is mandatory under the Prevention of Money-laundering (Maintenance of Records) Second Amendment Rules, 2017 published in the Official Gazette on June 1, 2017.

These Rules have statutory force and, as such, banks have to implement them without awaiting further instructions.

**Directions, Withdrwals, Penalties & Cancellation of Licences of Urban Co-operative Banks.**

**1) Oct 03, 2017 :** Directions under Section 35A of the Banking Regulation Act, 1949 (AACS) – Shree Ganesh Sahakari Bank Ltd, Nashik, Maharashtra- Extension of period.

**2) Oct 10, 2017 :** The Bhavana Rishi Co-operative Urban Bank Ltd., Hyderabad, Telangana – Penalised.

**3) Oct 10, 2017 :** RBI imposes penalty on The Needs of Life Co-operative Bank Ltd, Mumbai.

**4) Oct 12, 2017 :** The Anantapur Co-operative Town Bank Ltd., Anantapuramu, Andhra Pradesh – Penalised.

**5) Oct 13, 2017 :** RBI extends Directions issued to the HCBL Co-operative Bank Ltd., Lucknow, Uttar Pradesh.

**6) Oct 18, 2017 :** RBI Directions issued to Navodaya Urban Co-operative Bank Ltd, Nagpur, Maharashtra further extended upto January 15, 2018.

**7) Oct 24, 2017 :** Reserve Bank of India imposes monetary penalty on Yes Bank Limited.

**8) Oct 24, 2017 :** RBI imposes monetary penalty on IDFC Bank Limited.

**Source : www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು – 570004. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010